ಶ್ರೀ ಗಣೇಶ ಸ್ತುತಿ

ದೇವರನಾಮ

ಆದಿಯಲಿ ಗಜಮುಖನ ಅರ್ಚಿಸಿ (ಉಗಾಭೋಗ) ರಾಗ: ನಾಟ

ಆದಿಯಲಿ ಗಜಮುಖನ ಅರ್ಚಿಸಿ ಆರಂಭಿಸಲು। ಅವ ಬಗೆ ಕಾರ್ಯತತಿ ಸಿದ್ಧಿಗೊಳಿಸಿ। ಮೋದದಿಂ ಸಲಿಸುವ ಮನದಿಷ್ಟವ। ಸಾಧುಜನರೆಲ್ಲ ಕೇಳಿ। ಸಕಲ ಸುರರಿಂಗೆ ಮಾಧವನೇ ನೇಮಿಸಿಪ್ಪ। ಈ ಅಧಿಕಾರವ। ಆದರದಿಂದ ಅವರವರೊಳು ನಿಂದು। ಕಾರ್ಯಗಳ ಭೇದಗೊಳಿಸದೆ। ಮಾಳ್ಪ ಪುರಂದರವಿಠಲ॥

ಆರಂಭದಲಿ ನಮಿಪೆ ರಾಗ: ಹಂಸಧ್ವನಿ

ಆರಂಭದಲಿ ನಮಿಪೆ ಆಖುವಾಹನನೆ॥ಪ॥ ಹೇರಂಬ ಕೃಪೆ ಮಾಡೋ ಅಜನ ಮೊಮ್ಮಗನೆ॥ಅ.ಪ॥ ಆದಿಪೂಜೆಯು ನಿನಗೆ ಆಗಸದೊಡೆಯನೇ। ಪಾದದ್ವಯವ ತೋರೋ ಅಗಜೆನಂದನನೆ॥1॥ ಕರಿಮೊಗದವನೆ ಗಣಗಳ ಒಡೆಯನೆ। ಹರಿಗೆ ಮುನಿದವನ ಪ್ರಿಯನಾಗುದಿಸಿದೆ॥2॥ ಸೋಮನಿಗೆ ಶಾಪವಿತ್ತೆ ಲಂಬೋದರನೆ। ಕಾಮಜನಕನಿಂದ ಪೂಜೆಗೊಂಡಾತನೆ॥3॥ ಮುನಿಯು ಹೇಳಲು ಮಹಾಕಾವ್ಯವ ಬರೆದೆ। ಜನಿಸಿದೆ ಹರಿಯ ಮಗನಾಗಿ ದ್ವಾಪರದಲಿ॥4॥ ಮೋದಕಪ್ರಿಯನೆ ಮೋಹಕರೂಪನೆ ಪೂರ್ಣ। ಬೋಧಮುನಿ ಪ್ರಿಯ ಶ್ರೀಶ ವಿಠಲನ ದಾಸನೆ॥5॥

ಗಜಮುಖನೇ ಸಿದ್ಧಿದಾಯಕನೇ ರಾಗ: ಸಾರಂಗ

ಗಜಮುಖನೇ ಸಿದ್ಧಿದಾಯಕನೇ ವಂದಿಪೆ ಶರಣು॥ಪ॥ ತ್ರಿಜಗ ವಂದಿತನಾದ ದೇವದೇವನೆ ಶರಣು ಸುಜನರಿಗೆ ವಿಘ್ನವನು ಪರಿಹರಿಪೆ ಶರಣು॥ಅ.ಪ.॥ ಮಂದಮತಿಯನು ಬಿಡಿಸಿ ಚಂದ ಜ್ಞಾನವನಿತ್ತು ಇಂದಿರೇಶನ ಪಾದ ಹೊಂದಿಪ್ಪ ತೆರದಿ ಸುಂದರಾಂಗನೆ ನಿನ್ನ ಪದದ್ವಂದ್ವಕೆರಗುವೆನು ಸಂದೇಹ ಮಾಡದಲೆ ಇಂದು ಕರುಣಿಪುದು॥1॥ ಹರ ತನಯನೆ ಕರುಣಾಕರನೆ ಸುರನರ ವರದ ಮೊರೆಯ ಲಾಲಿಸಿ ಎನ್ನ ಕರಗಳನೆ ಪಿಡಿದು ಪೊರೆಯದಿದ್ದರೆ ಬಿಡೆನು ನೆರೆದೆ ನಿನ್ನಡಿಗಳನು ತ್ವರಿತದಿಂದಲಿ ನೋಡು ಶರಣೆಂಬೆ ನಿನಗೆ॥2॥ ಸಿದ್ಧಿದಾಯಕ ನಿನ್ನ ಹೊತ್ತು ಮೆರೆವೆನೊ ನಾನು ಅಬ್ಧಿಶಯನನ ಮಹಿಮೆ ಬದ್ಧದಲಿ ಪೇಳ್ವ ಶುದ್ಧ ಮತಿಯನು ಕೊಟ್ಟು ಉದ್ಧರಿಸಬೇಕೆನ್ನ ಮದ್ವವಲ್ಲಭ ವೇಣು ಕೃಷ್ಣಗೆ ಅತಿಪ್ರಿಯ॥3॥

ಗಜವದನ ಪಾವನ ರಾಗ: ಮಲಹರಿ

ಗಜವದನ ಪಾವನ। ವಿಘ್ನನಾಶನ॥ಪ॥ ವರ ಪಾಶಾಂಕುಶಧರ ಪರಮ ಪವಿತ್ರ। ಕರುಣಾ ಸಾಗರ ಗೌರಿ ಕುಮಾರನೇ॥ಅ.ಪ.॥ ಸುಂದರ ವದನ। ಅರವಿಂದ ನಯನ। ಘನ ಸುಂದರಿ ಕಂದನೆ॥1॥ ಬಂದು ರಕ್ಷಿಸೋ ಗೋಪಾಲ ವಿಠಲನ ಅಪಾರ ಭಜಕನೆ ಶಾಪಾನುಗ್ರಹ ಶಕ್ತ॥2॥

ಗಾಯನವ ಮಾಡೋ ಗಣನಾಥನ ರಾಗ: ಜಯಂತಶ್ರೀ

ಗಾಯನವ ಮಾಡೋ ಗಣನಾಥನ॥ಪ॥ ಗಾಯನ ಮಾಡೋ ವರಗಳ ಬೇಡೋ॥ಅ.ಪ.॥ ಆದಿಗೆ ಪೂಜೆಗೆ ಆಕರನೀತ। ಸಾಧನ ಸಂಪದಕೆ ಸುಮ್ಮನವೀವ॥1॥ ಭವ ಸಂಭವ ಭವಹರನೀತ। ಭಾವಜನಯ್ಯಗೆ ಅತಿಪ್ರೀತ॥2॥ ಮೂಷಿಕವಾಹನ ಲಂಬೋದರ ಶಕ್ತ। ಪಾಶಾಂಕುಶಧರ ಮೋದಕಹಸ್ತ॥3॥ ಭುಜಗ ಬಂಧನ ಗಂಧದ ಲೇಪ। ಗಜವದನನ ಸುಪ್ರತಾಪ॥4॥ ಸುರಋಷಿ ನರರಿಗೆ ಒಲಿವ ದಾತನೇ। ನಿರುತ ವೆಂಕಟ ವಿಠಲನ ದೂತ॥5॥

ತಾಂಡವ ನೃತ್ಯಕರೀ ಗಜಾನನ (ಮರಾಠಿ) **ರಾಗ: ಮಾಂಡ್**

ತಾಂಡವ ನೃತ್ಯಕರೀ ಗಜಾನನ॥ಪ॥ ಧಿಮಿ ಧಿಮಿ ಧಿಮಿಕಿಟ ಬಾಜೆ ಮೃದಂಗ ಬ್ರಹ್ಮಾತಾಳಧರೀ॥1॥ ತೈಂತೀಸ್ ಕೋಟಿ ದೇವ ಮಿಳಾವೆ ಮಧ್ಯೆ ಶಿವಗೌರೀ॥2॥ ಶ್ರೀರಮಾ ವಲ್ಲಭ ದಾಸ ಸದೋದಿತ ಚಂದ್ರಮ ಶೋಭೆಶಿರಿ॥3॥

ನಿನಗೆ ಸಮನಾರು ವಿಘ್ನೇಶ್ವರ **ರಾಗ: ಷಣ್ಮುಖಪ್ರಿಯ, ಆದಿತಾಳ**

ನಿನಗೆ ಸಮನಾರು ವಿಘ್ನೇಶ್ವರ। ತ್ರಿಭುವನದೊಳಗೆ ನಿನಗೆ ಸಮನಾರು॥ಪ॥ ನಿರ್ಮಲ ಭಕ್ತರಿಗೆ ಸುಲಭದಿ ಒಲಿಯುವ। ನಿರತ ಭಜಿಸುವರ ಸತತವು ಸಲಹುವ॥ಅ.ಪ.॥ ಜಗದಂಬಾಸುತನೆ ಜಗದ್ವಿಖ್ಯಾತನೆ। ಜಯ ಜಗದೀಶನ ಸುತನೆ ಗಣಪನೆ। ಜನ್ಮಜನ್ಮದ ಕರ್ಮ ಕಳೆವ ಗಜಾನನನೆ। ಜಗವ ಪಾಲಿಪ ವಿದ್ಯಾಧಿಪತಿಯೇ॥1॥ ಮೂಷಕಾಸುರನ ಅಪಜಯಗೊಳಿಸಿ। ಮೂಷಕ ವಾಹನನಾಗಿ ಹೊಳೆಯುವೆ। ಮಾನವರ ಮನವನು ಪರಿ ಪರಿ ಶೋಧಿಪ। ಶಾರದದಾಸಿ ವಂದಿತ ಗಣಪತಿಯೇ॥2॥

ನಂಬಿದರೆ ಅಳಿವಿಲ್ಲ ನಂಬದಿರೆ **ರಾಗ:ಶ್ರೀರಂಜನಿ, ಆದಿತಾಳ**

ನಂಬಿದರೆ ಅಳಿವಿಲ್ಲ ನಂಬದಿರೆ ಉಳಿವಿಲ್ಲ। ಅಂಬಾತನಯ ಶ್ರೀ ಲಂಬೋದರನೆ॥ಪ॥ ಬಿಂಬಾನನ ಗಜವದನ ಗಣಪ। ನಂಬಿಹೆ ನಾನಿನ್ನ ಬೆಂಬಿಡದೆ ಸಲಹೋ॥ಅ.ಪ.॥ ಪಾಶಾಂಕುಶಧರ ಪನ್ನಗಭೂಷಣ। ಪಾಪವಿಮೋಚನ ಪ್ರಸನ್ನ ವಿನಾಯಕ। ಪಂಚಮುಖಧರ ವಿಘ್ನೇಶ್ವರ। ಶಾರದಾದಾಸಿವಂದಿತ ಗಣೇಶ್ವರ॥ಚರಣ॥

ವಿಜಯವಲ್ಲಭ ವಿನಾಯಕ **ರಾಗ: ಸಾರಂಗ, ಆದಿತಾಳ**

ವಿಜಯವಲ್ಲಭ ವಿನಾಯಕ।ದಿಗ್ವಿಜಯ ಪ್ರದಾಯಕ ವಿನಾಯಕ॥ಪ॥ ಸುಜನ ಪಾಲಕ ವಿನಾಯಕ । ಸುಜ್ಞಾನವ ನೀಡೆನಗೆ ವಿನಾಯಕ॥ಅ.ಪ.॥ ಗೌರಿಕುಮಾರ ವಿನಾಯಕ। ಕುಮಾರಾಗ್ರಜ ವಿನಾಯಕ।ಶಾರದೆ ವಂದಿತ ವಿನಾಯಕ।ಸಂಕಟಪರಿಹಾರ ವಿನಾಯಕ ॥ಚರಣ॥

ಭಕ್ತಿಗೀತೆಗಳು

ಉಮಾ ಮಹೇಶನ ಕುಮಾರ **ರಾಗ: ಗೌಳ, ಆದಿತಾಳ**

ಉಮಾ ಮಹೇಶನ ಕುಮಾರ ನಿನ್ನ ಸರಿಸಮಾನರ್ಯಾರಯ್ಯ॥ಪ॥ ಸಮಸ್ತ ದೇವಾದಿ ದೇವಾನಿಕರವು ಭ್ರಮಿಸಿ ನಿನ್ನ ಪಾದ ಪೂಜಿಸುತಿರುವರು॥ಅ.ಪ.॥ ಘೋರ ದುರಿತ ಪರಿಹಾರಿ ವಿಘ್ನೇಶ್ವರ। ಕಾರುಣ್ಯ ಸಾಗರನೇ। ಧೀರಾ ಗಂಭೀರಾ ಉದ್ಧಾರ ಗುಣಪುರಾ। ಮಾರಜನಕ ವೆಂಕಟೇಶ್ವರ ಸಖಸುತಾ॥1॥ ವಿದ್ಯಾ ವಿಧಾತನೆ ಮುದ್ದು ಗಣೇಶನೆ। ಸದ್ಯೋಜಸುತ ಸಖನೆ। ವಿದ್ಯಾಬುದ್ಧಿಯನಿತ್ತು ಸದ್ಭಕ್ತರನ್ನೆಲ್ಲಾ। ಉದ್ಧಾರ ಮಾಡುವ ಸಿದ್ಧಿವಿನಾಯಕ॥2॥ ಲಂಬೋದರನೆ ನಿನ್ನ ನಂಬಿದೆ ಎಮ್ಮ ಕಾಯೋ। ಅಂಬಿಕ ವರಸುತನೆ। ಅಂಬುಜೋದ್ಭವ ಅಮರೇಂದ್ರಾದಿ ಪೂಜಿತ ಬಿಂಬಾತ್ಮ ಸೇವಿತ ಮುನಿಜನ ಸೇವ್ಯನೆ॥3॥

ಓಡಿ ಓಡಿ ಬಾರಯ್ಯ **ರಾಗ: ಕಾಮವರ್ಧಿನಿ**

ಓಡಿ ಓಡಿ ಬಾರಯ್ಯ ನಾಟ್ಯ ಗಣಪತಿ॥ಪ॥ ನೋಡಿ ಧನ್ಯರಾಗುವೆವು ನಿನ್ನ ಮೂರುತಿ। ಕಾಲಿಗೆ ಗೆಜ್ಜೆ ಕಟ್ಟಿ ನೀ ಕುಣಿಯುತ ಬರಲು। ಕಣ್ಗೆ ಹಬ್ಬವಾಗಿ ಹರಿವುದಾನಂದದ ಹೊನಲು। ಏಕದಂತ.... ವಿಘ್ನೇಶ್ವರ.... ಲಂಬೋದರ ॥1॥ ಕಿನ್ನರರು ಕಿಂಪುರುಷರು ಗಂಧರ್ವರು ಸುರರು। ಸೇರಿ ಸುಸ್ವರದಿ ಗಾನವ ಮಾಡುತಿರಲು। ಮೂಜಗವು ನಿನ್ನ ಕೊಂಡಾಡುತಿರಲು। ವಿಘ್ನರಾಜನೆ ಮುದದಿ ಸಿದ್ಧಿ ಬುದ್ಧಿಯ ಕೊಡು॥2॥ ನಂದಿ ಮೃದಂಗವ ನುಡಿಸಿ, ಭೃಂಗಿ ತಾಳವ ಹಾಕಲು। ಪ್ರಮಥಗಣವು ನಿನ್ನ ಸೇರಿ ಪರಮಾನಂದದಿ ಕುಣಿಯಲು। ಚಂದದಿ ಸೋದರ ಸುಬ್ರಹ್ಮಣ್ಯನೊಡನೆ ಬಾ। ಶ್ರೀ ಕೃಷ್ಣಾನಂದಾರ್ಚಿತ ಮೊಗವ ತೋರು॥3॥

ಕರಮುಗಿದು ಬೇಡುವೆನು **ರಾಗ: ಹಂಸಧ್ವನಿ**

ಕರಮುಗಿದು ಬೇಡುವೆನು ವಿಘ್ನೇಶ್ವರ ಬಂದ ವಿಘ್ನ ಪಾರುಮಾಡು ಸರ್ವೇಶ್ವರಾ॥ಪ॥ ಎಲ್ಲೆಲ್ಲೂ ಮೊದಲ ಪೂಜೆ ಓ ಗಣಪಯ್ಯ ಬೇಡಿ ಬಂದ ಭಕ್ತರನು ಕಾಪಾಡಯ್ಯ॥ಅ.ಪ.॥ ಜಗಜ್ಜನನಿಯ ಮೈ ಮಣ್ಣಲಿ ಹುಟ್ಟಿದೆ ನೀನು ತಂದೆಯನ್ನೆ ಧಿಕ್ಕರಿಸಿದ ಧೀರನು ನೀನು ತಾಯಿ ನುಡಿಯ ಪಾಲಿಸಲು ಪ್ರಾಣವ ಕೊಟ್ಟೆ ಆನೆ ಶಿರವ ಹೊತ್ತು ನೀನು ಗಜಮುಖನಾದೆ॥1॥ ಗಣಗಳಿಗೆ ಒಡೆಯನಾದ ಶಿವನ ಪುತ್ರನೇ ಸಿದ್ಧಿ ಬುದ್ಧಿ ಪ್ರಿಯನೆ ನಾ ನಿನ್ನ ನಂಬಿದೆ ತಾಯಿ ತಂದೆ ಮೂರು ಲೋಕವೆಂದು ಸಾರಿದೆ ನಿನ್ನ ನೋಡಿ ನಕ್ಕ ಚಂದ್ರನ ಗರ್ವವ ಮುರಿದೆ॥2॥

ಗಜಮುಖನೆ ಗಣಪತಿಯೆ **ರಾಗ: ಯಮುನ್‌ಕಲ್ಯಾಣಿ**

ಗಜಮುಖನೆ ಗಣಪತಿಯೆ ನಿನಗೆ ವಂದನೆ ನಂಬಿದವರ ಬಾಳಿನ ಕಲ್ಪತರು ನೀನೆ॥ಪ॥ ಭಾದ್ರಪದ ಶುಕ್ಲದ ಚೌತಿಯಂದು ನೀ ಮನೆಮನೆಗೂ ದಯಮಾಡಿ ಹರಸು ಎಂದೂ ನಿನ್ನ ಸನ್ನಿಧಾನದಿ ತಲೆಬಾಗಿ ಕೈಯ ಮುಗಿದು ಬೇಡುವಾ ಭಕ್ತರಿಗೆ ನೀ ದಯಾಸಿಂಧು॥1॥ ಈರೇಳು ಲೋಕದಿ ಅನು ಅನುದಿನಾ ಇಹಪರದ ಸಾಧನೆಗೆ ನೀನೆ ಕಾರಣ। ನಿನ್ನೊಲುಮೆ ನೋಟದ ಒಂದು ಹೊನ್ನ ಕಿರಣ ನೀ ನೀಡಿದರೆ ಸಾಕಯ್ಯ ಜನ್ಮ ಪಾವನ॥2॥ ಪಾರ್ವತಿ ಪರಶಿವನ ಪ್ರೇಮ ಪುತ್ರನೆ ಪಾಲಿಸುವ ಪರದೈವ ಬೇರೆ ಕಾಣೆ॥ ಪಾಪದ ಪಂಕದಲಿ ಪದುಮಎನಿಸು ಎನ್ನ ಪಾದಸೇವೆ ಒಂದೇ ಧರ್ಮಸಾಧನ॥3॥

ಗಜಮುಖ ಕುಣಿ ಕುಣಿದಾಡಿದನೇ ಲಂಬೋದರ **ರಾಗ: ಬೇಹಾಗ್**

ಗಜಮುಖ ಕುಣಿ ಕುಣಿದಾಡಿದನೇ। ಲಂಬೋದರ ನಾಟ್ಯವಾಡಿದನೇ॥ಪ॥ ಕಾಲಲಂದಿಗೆ ಗೆಜ್ಜೆ ಮೇಲೆ ಪೀತಾಂಬರ। ಉಡಿಗೆಜ್ಜೆ ಗಂಟೆಯು। ಘಣಿರೆನಲೂ। ಧಿಂಧಿಂಮಿಧಿಮಿಕೆಂದೂ ತಾಳಗತಿಗಳಿಂದ। ನಾಟ್ಯವನಾಡಿದ ಗಜಮುಖನೂ॥1॥ ಕರದಲಿ ಮೋದಕ ವರ ಅಭಯ ಹಸ್ತಗಳೂ। ತ್ರಿಶೂಲ ಅಂಕುಶವನೆ ಪಿಡಿದು। ಮುತ್ತಿನಾಭರಣವು। ಪುಷ್ಪಮಾಲಿಕೆಗಳು। ನಾಟ್ಯವ ನಾಡಿದ ಗಜಮುಖನೂ॥2॥ ಸೂರ್ಯನಂತ್ಹೊಳೆಯುವ। ಕರ್ಣ ಕುಂಡಲಗಳೂ ಒಂದು ಕೊಳಗದಕ್ಷತೆ ಹಣೆಗಿಟ್ಟು। ರತ್ನ ಮಾಣಿಕ್ಯದ ಕಿರೀಟವು ಶಿರದೊಳು। ನಾಟ್ಯವನಾಡಿದ ಗಜಮುಖನೂ॥3॥ ಭಕ್ತರೆಲ್ಲರೂ ಕೊಟ್ಟ ಮೋದಕ ಭುಂಜಿಸಿ। ತೃಪ್ತನಾಗಿ ವರಗಳ ಕೊಡುತಾ। ಹೊರಟನು ಕೈಲಾಸ ಪುರಕೆಂದು ಗಣಪನು। ನಾಟ್ಯವನಾಡಿದ ಗಜಮುಖನೂ॥4॥

ಗಣಪ ಕುಣಿದು ಬಾ **ರಾಗ: ಶಂಕರಾಭರಣ**

ಗಣಪ ಕುಣಿದು ಬಾ। ಥೈಯ ಥೈಯ ತಕ ದಿನಾದಿನಕ ತೋಂ। ನುಡಿಸುವೆನಾ। ಹೆಜ್ಜೆ ಮೇಲೆ ಹೆಜ್ಜೆ ಹಾಕಿ ದಿತ್ತಾಂ ದಿತ್ತಾಂ ತೋಂ ಥೈ ಥೈ ಕುಣಿ ನೀ ಗಣರಾಜ॥ಪ॥ ನಿನ್ನ ಭಜಿಸುವೆ ಕೈಯ ಮುಗಿಯುವೆ। ಹರಸಿ ಬಾರೋ ನೀ ಗಣರಾಜ। ವೀಣಾವಾದನವು। ಮಧುರ ಭಾಜನವು। ಸ್ವರಮಂಡಲವೇ ನುಡಿದಿರಲು॥1॥ ಗೌರಿತನಯನೀ ನಿನ್ನ ನರ್ತನಕೆ। ಧ್ರಿಮಿಧ್ರಿಮಿ ಧ್ರಿಮಿ ಧ್ರಿಮಿ ಮೃದಂಗವು॥ ಸಿತಾರು ಸಾರಂಗಿ ತಾಳ ಗೆಜ್ಜೆಗಳು ಮೊಳಗಿವೆ ನಿನ್ನಯ ನರ್ತನಕೆ॥2॥ ಚೆಲುವಿನ ಭಂಗಿಯೊಳು। ದೇವಲೋಕವ ಒಂದು ಮಾಡಿ। ನರ್ತಿಸಿ ಬಾರೋ ನೀ ಗಣರಾಜ॥ ಹೆಜ್ಜೆ ಮೇಲೆ ಹೆಜ್ಜೆ ಹಾಕಿ ಧಿತ್ತಾಂ ಧಿತ್ತಾಂ ತೋಂ ಥೈ ಥೈ ಕುಣಿನೀ ಗಣರಾಜ॥3॥ ಕೈಲಾಸದ ರಜತಗಿರಿಯಲಿ। ಶಿವನೊಡ್ಡೋಲಗ ನಡೆದಿರಲು। ಸಿತಾರು ಸಾರಂಗಿ ತಾಳ ಗೆಜ್ಜೆಗಳು ಮೊಳಗಿವೆ ನಿನ್ನಯ ನರ್ತನಕೆ॥4॥ ಶಿವ ಶಿವ ಹರ ಹರ। ಎನ್ನುವ ಭಕ್ತರ ತಣಿಸಿ ನರ್ತಿಸೋ ಗಣರಾಜ। ಹೆಜ್ಜೆ ಮೇಲೆ ಹೆಜ್ಜೆ ಹಾಕಿ ಧಿತ್ತಾಂ ಧಿತ್ತಾಂ ತೋಂ ಥೈ ಥೈ। ಕುಣೀ ಗಣರಾಜ॥5॥

ಗಜವದನಾ ಕರುಣಾ ಸದನಾ (ತಮಿಳು) **ರಾಗ: ಅಭೋಗಿ**

ಗಜವದನಾ ಕರುಣಾ ಸದನಾ। ಶಂಕರ ಬಾಲಾ ಲಂಬೋದರ ಸುಂದರ॥ಪ॥ ಅಜನುಂ ಮಹೇಂದ್ರನುಂ ಮುನಿವರುಂ ಪಣಿಯುಂ ಪಂಕಜ ಚರಣಾ ಶರಣಂ ಶರಣಂ॥ಅ.ಪ.॥ ನೀಯೇ ಮೂಲತ್ತಿನ್ ನೀಯೇ ಆಧಾರಂ ನೀಯೇ ಶಿವಾಗಮ ಮಂತ್ರಸಾರಂ ನೀಯೇ ವಾಳ್ವಿಲ್ ಜೀವಾಧಾರಂ ನೀ ಅರುಳ್‌ವಾಯ್ ಸುಮುಖಾ ಓಂಕಾರ॥ಚರಣ॥

ಜಯ ಗಣೇಶ ಗಣನಾಥ ದಯಾನಿಧಿ (ಹಿಂದಿ) **ರಾಗ: ಕಲ್ಯಾಣವಸಂತ**

ಜಯ ಗಣೇಶ ಗಣನಾಥ ದಯಾನಿಧಿ ಸಕಲ ವಿಘನ್ ಕರ್ ದೂರ್ ಹಮಾರೆ। ಪ್ರಥಮ ಧರೆ ಜೊ ಧ್ಯಾನ್ ತುಮ್ಹಾರೆ। ತಿಸ್‌ಕೆ ಪೂರಣ್ ಕಾರಜ್ ಸಾರೆ।।1।। ಲಂಬೋದರ ಗಜವದನ ಮನೋಹರ। ಕರತ್ರಿಶೂಲ ಪರಶೂವರ್ ಧಾರೆ ಋದ್ಧಿ ಸಿದ್ಧಿ ದೋವು ಚಮರ ಡುಲಾವೇ ಮೂಷಕವಾಹನ ಪರಮ ಸುಖಾರೆ।।2।। ಬ್ರಹ್ಮಾದಿಕ ಸುರ ಧ್ಯಾವತ್ ಮನ್ ಮೆ। ಋಷಿಮುನಿಗಣ ಸಬ್ ದಾಸ್ ತುಮ್ಹಾರೆ। ಬ್ರಹ್ಮಾನಂದ ಸಹಾಯಕರೋ ನಿರತಾ ಭಕ್ತ ಜನೋಂ ಕೆ ತುಮ್ ರಖ್‌ವಾರೆ।।3।।

ಜಯಗಣೇಶ2 ವಿಘ್ನ ಕಳೆವ **ರಾಗ: ಹಂಸಧ್ವನಿ**

ಜಯಗಣೇಶ ಜಯಗಣೇಶ ವಿಘ್ನ ಕಳೆವ ವಿಘ್ನೇಶ ಜಯತು ಜಯತು ಏಕದಂತ ಪ್ರಥಮ ಪೂಜಿತ ಪ್ರಪ್ರಥಮ ಪೂಜಿತ।।ಪ।। ಲಂಬೋದರ ಕರುಣಾಕರ ಉರಗಭೂಷಣ। ಗೌರಿಸುತ ಅನವರತ ಅಮರವಂದಿತ।।ಅ.ಪ.।। ಪಾಲಿಸು ವಿಘ್ನೇಶ ನಿನ್ನ ಪಾದಕೆ ವಂದಿಪೆ ಗಣೇಶ। ನೀಡುವೆ ಕಜ್ಜಾಯ ನಿನಗೆ ಕರಿಗಡುಬು ಪ್ರಿಯ ಶ್ರೀಗಣೇಶ।।1।। ಬುದ್ಧಿಯ ಜೊತೆ ಸಿದ್ಧಿಯ ಕೊಡು ದುರ್ಬುದ್ಧಿಯ ನಾಶ ಮಾಡು। ತಪ್ಪುಗಳನ್ನು ಮನ್ನಿಸಿ ಜ್ಞಾನ ನೀಡು ಗಜಮುಖನೇ।।2।।

ಜಯತು2 ಗಣನಾಥಾ ಭಯ **ರಾಗ: ಹಂಸಧ್ವನಿ**

ಜಯತು ಜಯತು ಗಣನಾಥಾ। ಭಯ ಪರಿಹಾರ ಮಂಗಳ ದಾತಾ। ಸೇವೆ ನೀಡು ತವ ಚರಣ ಕಮಲದ।।ಪ।। ಮೂಡಲಿ ಮಂಗಳ ಮತಿ ಮತಿಯಲ್ಲಿ। ನೆಲಸಲಿ ಸಹನೆಯು ಜನಮನದಲ್ಲಿ। ಹರಡಲಿ ಶಾಂತಿಯು ಪ್ರೇಮವು ಬೆಳಗಲಿ। ಯಶವ ಹರಸಿ ದಯತೋರೊ ದೇವಾ।।1।।

ಜಯ2 ಗೌರಿ ಶಂಕರ ತನಯ **ರಾಗ: ಸೌರಾಷ್ಟ್ರ**

ಜಯ ಜಯ ಗೌರಿ ಶಂಕರ ತನಯ। ಜಯ ಕರುಣಾಮಯ ಅಭಯಪ್ರದಾತ। ಜಯ ಪಾಶಾಂಕುಶಧರ ಲಂಬೋದರ। ಜಯ ವರದಾಯಕ ಗಜವದನ।।1।। ಕೈಲಾಸೇಶನ ಮುದ್ದಿನ ಕುವರನೆ। ಬಾಲಗಣೇಶನೆ ಮೋದಕ ಪ್ರಿಯನೆ। ತರಿಕಿಟ ತಾಳದಿ ನರ್ತಿಸಿದಾತನೆ। ಅಧಿನಾಯಕ ನಮೋ ಹೇ ಗಣರಾಯ।।2।। ಭಾರತ ರಚಿಸಿದ ವ್ಯಾಸ ಪ್ರಶಂಸಿತ। ಸಾರಸ್ವತ ಜನವಂದಿತ ಪೂಜಿತ ಬಾರೈ ಭಕ್ತರ ಹೃದಯ ವಿರಾಜಿತ। ಬಾರೈ ಶಿವಸುತ ಹೇ ಗಣನಾಥ।।3।।

ಜಯ2 ಗಣಪತಿ ಈಶಾ ಶ್ರೀಶಾ **ರಾಗ: ಹಂಸಧ್ವನಿ**

ಜಯ ಜಯ ಗಣಪತಿ ಈಶಾ ಶ್ರೀಶಾ। ಪೊರೆ ಕರುಣೇಶ ವಿಘ್ನವಿನಾಶ ।।ಪ।। ಅನಾಥರಕ್ಷಕ ನೀರಜಾಕ್ಷ। ಆದರಿಸಿ ಎಮ್ಮ ಕಾಯೋದೇವಾ। ನಮಿಪೆನು ಸದಯಾ। ವಿಘ್ನವಿನಾಶಾ।।ಅ.ಪ.।। ಪಾಶಾಂಕುಶಧರ ಪರಮಪವಿತ್ರ। ದೋಷ ಕ್ಷಮಿಸಿ ಎಮ್ಮ ಕಾಪಾಡೋ ದೇವ। ನಮಿಪೆನು ಸದಯ ವಿಘ್ನವಿನಾಶಾ।।ಚರಣ।।

ದೇವ2 ಗಣರಾಯನೆ ಕರುಣಿಸು **ರಾಗ: ಹಂಸಧ್ವನಿ**

ದೇವ ದೇವ ಗಣರಾಯನೆ ಕರುಣಿಸು। ಭಾವ ಭಕುತಿಯನು ಗುರುವೇ।।ಪ।। ರಾಗ ತಾಳ ಗತಿಯಿಂದಲಿ। ಪೊಗಳುವೆ। ಬಾಗಿ ಬಿನ್ನಮಿಸುವೆ ಗಿರಿಜ ತನಯನೆ।।ಅ.ಪ.।। ಪಾಶಾಂಕುಶಧರ ಪರಮಪವಿತ್ರನೆ। ದೋಷ ಕ್ಷಮಿಸಿ ಎಮ್ಮ ಕಾಪಾಡೋ ದೇವನೆ। ಆಶೆ ಸಲಿಸಿ ಭವ ಪಾಶ ನೀಗಿಪನೆ। ದಾಸಮನುಷ್ಯನ ಮನದಿಷ್ಟವೀಯೋ।।ಚರಣ।।

ನಮೋಸ್ತುತೆ ಗಣನಾಯಕ **ರಾಗ: ಹಂಸಧ್ವನಿ, ರೂಪಕ**

ನಮೋಸ್ತುತೆ। ಗಣನಾಯಕ। ಸಮಾನರುಂಟೆ ನಿಮಗೇಗ ಸ್ವಾಮಿ।।ಪ।। ನಂಬಿದೆ ನಿಮ್ಮ ಪಾದಾಂಬುಜ ಯುಗವ। ಬಂದ

ವಿಘ್ನವೆಲ್ಲ ನಿಂದು ಹರಿಸೋ ದೇವಾ।।1।। ಮೂಷಕವಾಹನ ಮೋದಕ ಪ್ರಿಯನೇ। ದೋಷಗಳೆಲ್ಲ ಹರಿಸಿ ಪಾಲಿಸೆಮ್ಮನು ದೇವಾ।।2।। ಕಾಮಹರನ ಸುತ। ಕಾಮಿತಾರ್ಥಪ್ರದಾತ। ನೇಮದಿಂದಲಿ ನಿಮ್ಮ ನಾಮವ ಪಾಡುವೆವು।।3।।

ನೀ ನಮ್ಮ ಗೆಲುವಾಗಿ ಬಾ **ರಾಗ: ಹಂಸಧ್ವನಿ**

ನೀ ನಮ್ಮ ಗೆಲುವಾಗಿ ಬಾ ಗಜಮುಖನೆ।।ಪ।। ಗುರುಕುಲಕೆ ವರವಾಗಿ ಗುರಿತೋರೋ ಗುರುವಾಗಿ। ಒಲಿನೀನು ಎಂದೆಂದು ಕರುಣಾಳು ಬಾ ಬಂಧು।।ಅ.ಪ.।। ಬಾಳಲ್ಲಿ ಮುಂದಾಗಿ ಬಾನಮ್ಮ ಜೊತೆಯಾಗಿ। ಕ್ಷಣಕ್ಷಣವು ನಮಗಾಗಿ ಬೆಳಕಾಗಿ ನೆರವಾಗಿ। ದಯೆ ಇರಲಿ ನಮ್ಮಲ್ಲಿ ಗತಿನೀನೆ ಆದಿಯಲ್ಲಿ।।1।। ನಿಧಿಯಾಗಿ ವಿಧಿಯಾಗಿ ಸುಧೆತುಂಬಿ ಒಲವಾಗಿ। ಹಿರಿಯಾದ ಸಿರಿನೀನು ಈ ಬಾಳ ಸವಿಜೇನು। ದಯೆ ಇರಲಿ ನಮ್ಮಲ್ಲಿ ಗತಿನೀನೆ ಆದಿಯಲ್ಲಿ।।2।।

ಪಾಲಿಸು ಗಜವದನಾ ದೇವಾ **ರಾಗ: ಕಲ್ಯಾಣಿ, ಆದಿತಾಳ**

ಪಾಲಿಸು ಗಜವದನಾ ದೇವಾ। ಪಾಲಿಸು ಗಜವದನ।।ಪ।। ಮಂಗಳಾತ್ಮನೆ ಚಿದ್‌ಘನರೂಪ। ಮಂಗಳ ಮೂರುತಿ ದಿವ್ಯಸ್ವರೂಪ। ತೋರೈ ತವರೂಪ ಭಜಿಸುವೆ। ಕರುಣಾಮಯ ಪ್ರಭುವೇ ದೇವ।।1।। ಸಾಂಬತನಯನೆ ಅಂಬಾಬಾಲ। ಲಂಬೋದರನೆ ಅಂಬರದೀಶ್ವರ। ಪೊರೆಯೈ ಕರುಣದಲಿ ಭಜಿಸುವೆ। ಕರುಣಾಮಯ ಪ್ರಭುವೆ ದೇವ।।2।।

ಪಾರ್ವತಿ ತನಯ ಪಾಶಾಂಕುಶಧರ **ರಾಗ: ಹಂಸಧ್ವನಿ**

ಪಾರ್ವತಿ ತನಯ ಪಾಶಾಂಕುಶಧರ ಲೋಕಪಾವನ ಗಜಾನನ ಸುರನರ ವಂದ್ಯ ಶರವಣ ಸೋದರ ಮೂಷಕವಾಹನ ಗಣನಾಯಕ।।ಪ।। ದುರಿತನಿವಾರಕ ಗಜವದನ ಭಕುತರೆಲ್ಲರೂ ನಿನ್ನ ನಂಬಿಹರು ಸಕಲ ಭಾಗ್ಯವನು ಕರುಣಿಸೋ ಗಣಪ।।ಅ.ಪ.।। ನಿಗಮಗೋಚರನೆ ಕರಿಮುಖವದನನೇ ವಿಘ್ನಗಳೆಲ್ಲವ ಪರಿಹರಿಸೋ ದೇವ ಸಕಲ ವೇದಾಂತ ವೇದ್ಯ ಕರಿಮುಖನೆ ನೀಡಯ್ಯ ಪರಂಧಾಮ।।1।। ಲಂಬೋದರ ಶರಣಾಗಿ ಬೇಡುವೆನು ಸತ್ಯಾಶ್ರಯ ವರವ ನೀನೆಮಗೆ ನೀ ಭಕ್ತಾಶ್ರಯ ಎಂದೆಂದು ನೀನೆಮಗೆ ಮುಕ್ತಾಶ್ರಯ।।2।।

ಪಾಹಿ ಗಜಮುಖ ಪಾಹಿ ಷಣ್ಮುಖ **ರಾಗ: ಕಲ್ಯಾಣಿ**

ಪಾಹಿ ಗಜಮುಖ ಪಾಹಿ ಷಣ್ಮುಖ। ಪಾಹಿ ಸಿದ್ಧಿವಿನಾಯಕ। ಪಾಹಿ ಸುರಗಣನಾಯಕ। ಪರಿಪಾಹಿ ಮೋಕ್ಷ ಪ್ರದಾಯಕ।।ಪ।। ಶೃಂಗಪುರದಲಿ ಬಂದು ನೆಲೆಸಿಹ ಕಂಬದ ವಿನಾಯಕ ಬಂದು ಬೇಡುವೆ ಒಂದು ವರ ಕೊಡು ತಂದು ಕೊಡುವೆನು ಮೋದಕ।।1।। ಭಕ್ತಿಯಿಂದಲಿ ನಿನ್ನ ಪಾದವ ಮುಟ್ಟಿ ಪ್ರಾರ್ಥನೆ ಮಾಡುವೆ ಭಕ್ಷ್ಯಗಳ ತಂದೊಪ್ಪಿಸುವೆನು ಪುಷ್ಪ ಪೂಜೆಯ ಮಾಡುವೆ।।ಪಾಹಿ।।2।।ಶ್ರೀ ಸಚ್ಚಿದಾನಂದ ಶಿವಾಭಿನವ ನರಸಿಂಹ ಭಾರತಿ। ಮತ್ತೆ ಗುರುಗಳ ಸ್ತೋತ್ರಕೆ। ವರವಿತ್ತು ಪಾಲಿಸು ದೃಢಮತಿ।।3।।

ಪ್ರಥಮ ಸಮರ ಶ್ರೀ ಗಣೇಶ (ಮರಾಠಿ) **ರಾಗ: ಕಾಮವರ್ಧಿನಿ**

ಪ್ರಥಮ ಸಮರ ಶ್ರೀ ಗಣೇಶ ಗೌರೀಸುತ ಪ್ರಿಯಮಹೇಶಾ। ಸಕಲ ವಿಘನ್ ಭಯಕಲೇಶಾ ದೂರ್ ಸೇ ನಿವಾ...ರೋ।।ಪ।। ಲಂಬಉದರ ಭುಜವಿಶಾಲಾ ಕರತ್ರಿಶೂಲ್ ಚಂದ್ರಬಾಲಾ। ಶೋಭತ್ ಗಲ್ ಪುಷ್ಪ ಮಾಲಾ ರಕ್ತವಸನ್ ಧಾರ್ ।।1।। ಬುದ್ಧಿ ಸಿದ್ಧಿ ದೋವುನಾರಾ ಶರಣ ಕರತ್ ಬಾರ್‌ಬಾರ್ ಮೂಷಕ ವಾಹನ್ ಸವಾರಾ। ಭಕ್ತನ್ ಹಿತ ಕಾರಿ।।2।। ಪೂರಣ್‌ಗುಣ್ ಗಣನಿಧಾನ್ ಸುರನರಮುನಿ ಯಶ್ ಕರತ ಗಾಣ್ ಬ್ರಹ್ಮಾನಂದ್ ಚರಣ್ ಧ್ಯಾನ್ ಸಕಲ ಕಾಜ್ ಸಾ ... ರೇ।।3।।

ಬಲಮುರಿ ಗಣಪನೆ ಭಜಿಸಿ **ರಾಗ:ಆಠಾಣ, ಆದಿತಾಳ**

ಬಲಮುರಿ ಗಣಪನೆ ಭಜಿಸಿ ಬೇಡುವೆವು। ಬಲಭುಜವಾಗಿ ಭವ, ಬಂಧನಗಳ ಬಿಡಿಸೋ।।ಪ।। ಸಂಕಷ್ಟಿ ಅಭಿಷೇಕ

ಗಂಧ, ಪುಷ್ಪ ಪೂಜಿಸುತ। ಪಂಚ ಫಲಗಳ ತಂದು ಅರ್ಪಿಸುವೆವೊ।।ಅ।। ಮಹಾಮಹಿಮನೆ ನಿನ್ನ ಎಷ್ಟು ವರ್ಣಿಸಲಿ ನಾ। ಅಭಯ ಹಸ್ತದಿ ನಿಂತ ವೈಭೋಗವನ್ನು।। ಪಂಚ ಭೂತಗಳ ತತ್ತ್ವ ಸ್ವರೂಪನೆ ನೀನು। ಮಂಗಳಾಂಗನೆ ನೀನು ಸಂಕಷ್ಟಿ ಪೂಜಿತನೆ।।1।। ನಿನ್ನ ಮೂರುತಿ ನಿಲಿಸೋ ಎನ್ನ ಹೃದಯ ಮಂದಿರದಿ। ನಿತ್ಯಾನಂದನೆ ನಿಗಮ ಗೋಚರನೆ।। ನಿನ್ನ ಸೇವೆಯ ಭಾಗ್ಯ ನಮಗೆ ನೀ ಕರುಣಿಸೊ। ಧನ್ಯರನು ಮಾಡೋ ನೀ ಕುಕ್ಕೆಸ್ವಾಮಿಯ ಸೋದರನೆ।।2।।

ಬಾ ಬಾರೋ2 ಗಣನಾಯಕಾ ಶಂಕರ **ರಾಗ: ಕಲ್ಯಾಣವಸಂತ**

ಬಾ ಬಾರೋ ಬಾರೋ ಗಣನಾಯಕಾ। ಶಂಕರ ತನಯಾ ಸುಖದಾಯಕ।।ಪ।। ವಸ್ತ್ರ ಪೀತಾಂಬರ ಮಣಿಕುಂಡಲಧರ। ಪಾಶಾಂಕುಶಧರ। ಗಣನಾಯಕ। ಚಾಮರ ಕರ್ಣ ಉರಗ ಭೂಷಣ। ಮೂಷಿಕ ವಾಹನ ಗಣನಾಯಕ।।1।। ಮಂಗಳ ಕಾರಕ। ಮಂಗಳದಾಯಕಾ। ಮಂಗಳ ಪೂರಕ। ಗಣನಾಯಕಾ। ಮಂಗಳಾಂಗಶಿವ। ಶಂಭುಕುಮಾರ। ಮಂಗಳ ವೀಯೋ ಗಣನಾಯಕ।।2।। ಅಂಗಜಾರಿಸುತ। ಹೇಲಂಬೋದರ। ಸ್ಕಂದ ಪೂರ್ವಜ ಗಣನಾಯಕಾ। ಬಂಧ ವಿಮೋಚನ ಭವಭಯ ನಾಶನ। ಶಾರದೆ ಸನ್ನುತ ಗಣನಾಯಕಾ।।3।।

ಬ್ರಹ್ಮಾಂಡದೊಳಗೆಲ್ಲ ಎಲ್ಲಿಯಾದರಲ್ಲಿ **ರಾಗ: ಹಂಸಧ್ವನಿ**

ಬ್ರಹ್ಮಾಂಡದೊಳಗೆಲ್ಲ ಎಲ್ಲಿಯಾದರಲ್ಲಿ ನೆಲೆಸಿರುವ ಗಣೇಶ ಶರಣು ಶರಣು। ಜಗಕೆಲ್ಲ ಪಿತನಾದ ಈಶ್ವರನ ಸುತನಾಗಿ ಮೆರೆದಿರುವ ಗಣೇಶ ಶರಣು ಶರಣು।।1।। ಭಕ್ತಿಯಿಂದಲಿ ಪೂಜಿಸಿ ಭಕ್ತರನು ಸಲಹಿರುವ ಗಣೇಶ ಶರಣು ಶರಣು। ನೇಮನಿಷ್ಠೆಯಿಂದಲಿ ಆರಾಧಿಪರನು ಪೋಷಿಸುವ ಗಣೇಶ ಶರಣು ಶರಣು।।2।। ಕರದಲ್ಲಿ ಪಾಶಾಂಕುಶ ಸಿಹಿಮೋದಕವನು ಹಿಡಿದಿರುವ ಗಣೇಶ ಶರಣು ಶರಣು। ಇಪ್ಪತ್ತೊಂದು ಬಗೆಯ ಪತ್ರೆಹೂ ಪೂಜೆಯನು ಪಡೆದಿರುವ ಗಣೇಶ ಶರಣು ಶರಣು।।3।। ತಂಪಿನ ಚಂದ್ರನಿಗೆ ಅಜ್ಞಾನದಿರುಳನ್ನು ಹರಿಸಿದ ಬೆನಕ ಗಣೇಶ ಶರಣು ಶರಣು। ಶ್ರೀ ಶೇಷಶಾಯಿಯ ಅಪವಾದ ನೀಗಿಸಿದ ಮಹಿಮಾನ್ವಿತ ಗಣೇಶ ಶರಣು ಶರಣು।।4।।

ಭಕ್ತ ಜನಕೆ ಅಭಯ ಕೊಡುವ ವಿನಾಯಕ **ರಾಗ: ಕಲ್ಯಾಣಿ**

ಭಕ್ತ ಜನಕೆ ಅಭಯ ಕೊಡುವ ವಿನಾಯಕ। ಜಯಜಯಜಯ ಗಣೇಶ ಗೌರೀನಂದನ।।ಪ।। ವಿಘ್ನವಿನಾಯಕ ಬುದ್ಧಿ ಪ್ರದಾಯಕ। ವಿದ್ಯೆಯ ನೀಡೋ ವಿಘ್ನರಾಜ।।ಅ.ಪ.।। ಪ್ರಥಮ ಪ್ರಣಾಮವು ಪಾರ್ವತಿ ನಂದನ। ಪಾಶಾಂಕುಶಧರ ಪ್ರಸನ್ನ ವದನ। ಭಕ್ತಿಯೊಳ್ ನಮಿಸುವೆ ಭವಾನಿ ನಂದನ ಭುವಿಯೊಳಗೆಣೆಗಾಣೆ ಭಯಪರಿಹಾರಿ।।1।। ಶಂಕರ ತನಯ ಶಶಿಗರ್ವ ಭಂಜನ। ಶಕ್ತಿಯ ಕೊಡು ನೀ ಸಿದ್ಧಿವಿನಾಯಕ। ಮಾಧವ ಪ್ರಿಯನೆ ಮಹಾಮಹಿಮನೆ। ಮೋದಕ ಹಸ್ತ ಮಾಂಪಾಹಿ ದೊರೆಯೇ।।2।।

ಮಧುರಾಕ್ಷರದ ನಾಮ ವರಸಿದ್ಧಿವಿನಾಯಕ **ರಾಗ: ಆಭೇರಿ**

ಮಧುರಾಕ್ಷರದ ನಾಮ ವರ ಸಿದ್ಧಿವಿನಾಯಕ ಮಧುರಾಮೃತದ ಗಾನ ಶುಭನಾಮ ಬೆನಕ।।ಪ।। ಜನನಿಯ ನುಡಿಯ ಆಣತಿಯ ಪರಿಪಾಲಿಸಿದ ಗಣಪ। ಆನೆ ಮೊಗವನು ಧರಿಸಿದ ಅಪರೂಪದ ದೈವ ಗಣಪ। ಜ್ಞಾನಿ ವ್ಯಾಸರ ಮಹಾಭಾರತವ ಬರೆದ ಓ ಗಣಪ ನಿನ್ನ ಭಕ್ತರ ವಿದ್ಯೆಯನು ಗುರುತಿಸ ಬಾರೊ ಗಣಪ।।1।। ಸುಂದರ ರೂಪಿನಿಂದ ಆಶೀರ್ವಾದವ ಗೈವ ಗಣಪ। ಹೃದಯಕೆ ಮುದವ ತಂದುಕೊಡುವ ಗಾನಲೋಲ ನೀ ಗಣಪ। ಕಣ್‌ಗಳಿಂದ ಕಾಂತಿ ಬೀರುವ ಸುಂದರಾಂಗ ತೇಜ ಗಣಪ। (ಬೆನಕ) ರಂಗನಂತರಂಗಕೆ ಆನಂದ ತಂದ ಮಹಿಮಾಧೀಶ ಬೆನಕ।।2।। ವ್ಯಾಕರಣ ಪಂಡಿತ ವಾಗ್ಮಿ ಮಹಾಜ್ಞಾನಿ ಗಣಪ ಭೀಕರ ಭೀತಿಯ ನೀಗಿಸುಬಾರೊ ಶುಭಕರ ಓ ಗಣಪ। ಶ್ರೀಕರಗೊಲಿದ ಶ್ರೀಕಂಠೇಶ್ವರನ ಪ್ರೀತಿಯಸುತ ಗಣಪ। ನಾ ಕರಕಮಲದಿಂ ವಂದಿಪೆ ಆದಿ ಪೂಜ್ಯ ಗಣಪ।।3।।

ಮಹಾಕಾಯ ಮಹಾವೀರ್ಯ **ರಾಗ: ಪಂತುವರಾಳಿ**

ಮಹಾಕಾಯ ಮಹಾವೀರ್ಯ। ಮಹಾ ಮಹಿಮ ಗಣಪತಿ। ಮಹಾತೇಜ ಮಹಾದೇವ। ವಂದನ ಶ್ರೀ ಗಣಪತಿ।।ಪ।।

ಏಕದಂತ ಅನೇಕ ಚರಿತ। ಶ್ರೀಕರ ಶ್ರೀ ಗಣಪತಿ। ಪಾಕಶಾಸ ನಾದಿವಂದ್ಯ ಶೋಕದೂರ ಗಣಪತಿ॥1॥ ಶೂರ್ಪಕರ್ಣ ತಾಪಹರಣ ಸರ್ವಾಭರಣ ಗಣಪತಿ। ಪಾಪಹರಣ ಸುಪ್ರಸನ್ನ ಪ್ರೇಮಪೂರ್ಣ ಗಣಪತಿ॥2॥ ನಾಮರೂಪರಹಿತ ಹೇಮವರ್ಣದೇವ ಗಣಪತಿ। ವಿಮಲ ಭರಿತ ಸುಮನ ಚರಿತ ನಮೋ ಸ್ವಾಮಿ ಗಣಪತಿ॥3॥ ಪರಮ ಪುರುಷ ತ್ರಿಜಗ ನಮಿತ ಶರಣು ಶರಣು ಗಣಪತಿ। ಪರಮೇಶ್ವರ ಹೃದಯವಾಸ ವರದಹಸ್ತ ಗಣಪತಿ॥4॥

ಮಾರವೈರಿ ತನುಜನೆ — ರಾಗ: ಕಾಂಭೋಜಿ

ಮಾರವೈರಿ ತನುಜನೆ ಭೂರಿ ಸುಂದರಾಂಗನೆ ಚಾರುಹಾಸ ಪಾಲಿಸೆನ್ನ ನೀರಜಭವ ಮಾಧವನುತ॥ಪ॥ ಅಜಮುಖಾಮರೇಂದ್ರರೂ ಭಜಿಸಿ ಸಿದ್ಧಿಗೊಂಬರೂ ಸುಜನ ಕಮಲ ದಿನಕರಾ ಭುಜಗ ವಿಧೃತ ತ್ರಿಜಗವಿನುತ॥1॥ ತ್ರಿಪುರ ದಹನ ಕಾಲದಿ ರಿಪುವಾಗಿ ನಿಮ್ಮನ್ನು ತಪವ ಗೈದು ಭಜಿಸೆ ಸುಪಥವ ಕರುಣಿಸಿದೆಯೋ ವಿಭು॥2॥ ಧೇನುನಗರ ಧಾಮನೇ। ಸ್ವಾಮಿ ವಿಘ್ನರಾಜನೇ ಸಾಮಜಾಸ್ಯ ಪಾಲಿಸೆನ್ನ ಕಾಮಿತಗಳ ನೀಡುತ॥3॥

ವಿಘ್ನೇಶ ತವ ಶರಣಂ — ರಾಗ: ಹಂಸಧ್ವನಿ

ವಿಘ್ನೇಶ ತವ ಶರಣಂ ಸಿದ್ಧಿವಿನಾಯಕ ತವ ಶರಣಂ॥ಪ॥ ಗಂಗಾ ಜಟಾಧರ ಗೌರಿ ಮನೋಹರ ಗಿರಿಜಾ ತನಯ ತವಶರಣಂ॥1॥ ಲಂಬೋದರ ಹೇ ಅಂಬಾಸುತ ಹೇ ಭಕುತಜನನುತ ಹೇ ತವಶರಣಂ॥2॥ ಸಕಲ ಕಲಾಧಾರ ಕಲುಷವಿದೂರ ಸಕಲ ಜಗತ್ರಯ ತವ ಶರಣಂ॥3॥

ವಿಘ್ನೇಶ್ವರ ನಿನಗೆ ಪ್ರಥಮ ಪ್ರಣಾಮ — ರಾಗ : ಕಾಮವರ್ಧಿನಿ

ವಿಘ್ನೇಶ್ವರ ನಿನಗೆ ಪ್ರಥಮ ಪ್ರಣಾಮ। ಸ್ಮರಿಸುವೆ ನಿನ್ನಯ ದಿವ್ಯ ನಾಮ॥ಪ॥ ವಿಘ್ನನಿವಾರಕ ಬುದ್ಧಿ ಪ್ರದಾಯಕ ವಿದ್ಯೆಯ ನೀಡೋ ಹೇ ವರದಾಯಕ॥ಅ.ಪ॥ ಚರಣ ಕಮಲವನು ಪೂಜಿಪೆ ಅನುದಿನ ಪಾವನಗೊಳಿಸೋ ಹೇ ಶಾಂತಿಧಾಮ॥1॥ ಗಂಗಾಧರಸುತ ಚಂದ್ರಸುಧಾರಕ ಮಂಗಳ ಕರುಣಿಸೊ ಹೇ ಶುಭದಾಯಕ॥2॥ ಭವಸಾಗರವನು ದಾಟಲು ಅನುದಿನ ಸಾಧನವೇ ತವ ತಾರಕನಾಮ॥3॥ ವಿಘ್ನಗಳ ಕಳೆವ ವಿಘ್ನವಿನಾಯಕ ಬೇಡುವೆ ನಿನ್ನಯ ಕೃಪೆಯನು ಅನುದಿನ॥4॥ ನಿನ್ನಯ ಮಹಿಮೆಯ ನೆನೆಯುವೆ ಪ್ರತಿಕ್ಷಣ ವಂದಿಪೆ ನಿನಗೆ ಜಗಸಂರಕ್ಷಕ॥5॥

ವಿನಾಯಕ ಗೌರಿಸುತ — ರಾಗ: ಹಂಸಧ್ವನಿ

ವಿನಾಯಕ ಗೌರಿಸುತ ಸುರನರ ವರಪಿತ ವಿನಾಯಕ। ಭವಭಯನಾಶಕ ಜಗವನು ಪಾಲಿಪನೇ ವಿನಾಯಕ॥ಪ॥ ಗಣಪತಿ ವಂದಿಸುವೆ ಶಿರಬಾಗಿ ನಮಿಸುವೆ। ತನು,ಮನ,ಧನ, ನಿಧಿ ಎಲ್ಲವ ಅರ್ಪಿಸುವೆ॥ಅ.ಪ.॥ ವರ ದಿವ್ಯ ರಾಶಿ ಬಿಲ್ವತ್ರೆ ಬಹುವಿಧ ಪುಷ್ಪ ಧರಿಸಿ। ಶ್ರೀಗಂಧದ ವರಕಾಂತಿಯಿಂದ ಕಂಗೊಳಿಪ ನಿನ್ನ ಭಜಿಸಿ॥1॥ ಬಿಸಿ ಹಾಲು ಜೇನು ಸಿಹಿಯಾದ ತಿನಿಸು ಸವಿಯಾದ ಫಲಗಳೆಲ್ಲ। ನೈವೇದ್ಯಮಾಡಿ ಕೀರ್ತನೆಯ ಹಾಡಿ ಆರತಿಯಾ ಮಾಡಿ॥2॥ ಹೇ ವಕ್ರತುಂಡ ಹೇ ಏಕದಂತ ಹೇ ವಿಘ್ನನಾಶ ಗಣಪ ಹೇ ಜ್ಞಾನ ನಿಧಿಯೇ ವರನೀಡು ಮಹಿಮನೆ ಹರಸೆಮ್ಮನು ಬೇಗ॥3॥

ಶಕ್ತಿಯ ಕೊಡು3 ಬೆನಕ — ರಾಗ: ಕಾನಡ

ಶಕ್ತಿಯ ಕೊಡು ಶಕ್ತಿಯ ಕೊಡು ಶಕ್ತಿಯ ಕೊಡು ಬೆನಕ...। ಭಕ್ತಿಯಕೊಡು ಮುಕ್ತಿಯ ಕೊಡು ಜಗದರಿವಿನ ಬೆಳಕ....॥ಪ॥ ಬೆಳಗೇಳುತ ಚಳಿನೀಗುತ ತಮ ಓಡಿಸೋ ಬೆಳಕ। ತೊಳಬೆಳಗುತ ಹೊಳೆಹೊಳೆಯುತ ಮಮ ಬಿಡಿಸೋ ತವಕ ॥1॥ ವಿದ್ಯೆಗೆ ಸದ್ ವಿದ್ಯೆಗೆ (ಸದ್ಬುದ್ಧಿಗೆ) (ಹೊಸ) ಚೈತನ್ಯದ ರೂಪ। ಭಕ್ತಿಗೆ ಗುರುಭಕ್ತಿಗೆ ಹೊಸ ಭಾವನೆ ರೂಪ ॥2॥ ಮೂಡಲೀ ಮನದಂಗಳದೆ ಸುಖ ಶಾಂತಿಯ ದೀಪ। ಆಗಲಿ ಹೃದಯಂಗಳು ಹೊಸ ಕಾಂತಿಯ ರೂಪ॥3॥ ಹಾಡಲಿ ಹೊಸ ಹಾಡನು ಹೃದಯದ ಹುರುಪು। ಓಡಲಿ ತಾನೋಡಲಿ ತನು ಕತ್ತಲೆ ಕುರುಹು॥4॥ ಮೂಡಲಿ ಮಮತೆಯು ಭಾವನೆ ಮನದೆ। ಕೂಡಲಿ ಹೃದಯಂಗಳು ಸುಖ ಶಾಂತಿಯ ಕಣದೆ ॥5॥

ಶತಕೋಟಿ ತೇಜನೆ ಶಕ್ತಿ **ರಾಗ: ಕಲ್ಯಾಣಿ, ಆದಿತಾಳ**

ಶತಕೋಟಿ ತೇಜನೆ ಶಕ್ತಿ ಪ್ರದಾತನೆ। ಶಿವಸುತ ವರಗಣರಾಜ॥ಪ॥ ಗಣಾದಿ ಸೇವಿತ ಶುಭ ಫಲದಾಯಕ ತ್ರಿಜಗವಂದಿತ ಗಜವನದ। ಲೋಕನಾಯಕನೆ ಲಂಬೋದರನೆ ಕಾಮಿತದಾಯಕ ಕರುಣಾಮೂರ್ತೇ॥1॥ ವಿದ್ಯಾಧಿದೇವನೆ ಆದಿಪೂಜ್ಯನೆ ವಿತರಣ ಗುಣಗಣ ಮಹಿಮನೆ। ಮೋದಕ ಪ್ರಿಯಕರ ಮೂಷಕವಾಹನ ವಿಘ್ನನಿವಾರಕ ವಿಘ್ನೇಶ್ವರ॥2॥ ಶೋಕನಿವಾರಕ ಅಂಬಾಸುತನೆ ಬೆಂಬಿಡದೆ ಪೊರೆ ದೇವನೇ। ಪಾಶಾಂಕುಶಧರ ಗಜವದನ ಪಾರ್ವತಿ ಪ್ರಿಯಕರ ನಂದನಾ॥3॥

ಭಜನೆಗಳು

ಗಜವದನಾ ಗಣನಾಥಾ **ರಾಗ: ಷಣ್ಮುಖಪ್ರಿಯ**

ಗಜವದನಾ ಗಣನಾಥಾ। ಗೌರಿ ತನಯ ದಯಾಮಯಾ॥ ಭುವನೋದ್ಧಾರ ಪ್ರಣವ ಸ್ವರೂಪ। ಪಾಲಯ ಪಾಲಯ ಪರ್ತಿ ಪುರೀಶ॥

ಗಜಾನನ ಹೇ ಶುಭಾನನ **ರಾಗ: ಹಿಂದೋಳ**

ಗಜಾನನ ಹೇ ಶುಭಾನನ। ಗೌರಿ ಮನೋಹರ ಪ್ರಿಯ ನಂದನ। ಪಶುಪತಿ ತನಯ ಗಜಾನನ ಹೇ ಪರಮ ನಿರಂಜನ ಶುಭಾನನ॥

ಗಣಪತಿ6 ಪಾಲಯಮಾಂ **ರಾಗ: ಹಂಸಧ್ವನಿ**

ಗಣಪತಿ ಗಣಪತಿ ಗಣಪತಿ ಗಣಪತಿ। ಗಣಪತಿ ಗಣಪತಿ ಪಾಲಯ ಮಾಂ॥ ಗಣಪತಿ ಬಾಲಪತಿ ಗಂಭೀರ ಗಣಪತಿ। ಜ್ಞಾನ ಗಣಪತಿ ಪಾಲಯಮಾಂ॥ ಗಣಪತಿ ಗಣಪತಿ ಗಜಪತಿ ಮಮಪತಿ। ವರಪತಿ ಸುರಪತಿ ಪಾಲಯ ಮಾಂ॥

ಗೌರಿನಂದನ ಗಜಾನನ **ರಾಗ: ಕಲ್ಯಾಣಿ**

ಗೌರಿನಂದನ ಗಜಾನನ। ಗಿರಿಜಾನಂದನ ನಿರಂಜನ। ಪಾರ್ವತಿ ನಂದನ ಶುಭಾನನ। ಪಾಹಿ ಪ್ರಭೋ ಮಾಮ್ ಪಾಹಿ ಪ್ರಸನ್ನ॥

ಜಯ ಗಣೇಶ3 ಪಾಹಿಮಾಂ **ರಾಗ: ಮಾಂಡ್**

ಜಯ ಗಣೇಶ। ಜಯ ಗಣೇಶ। ಜಯ ಗಣೇಶ ಪಾಹಿಮಾಂ। ಜಯ ಗಣೇಶ ಜಯ ಗಣೇಶ ಜಯ ಗಣೇಶ ರಕ್ಷಮಾಂ॥1॥ ಶ್ರೀ ಗಣೇಶ ಶ್ರೀ ಗಣೇಶ ಶ್ರೀ ಗಣೇಶ ಪಾಹಿಮಾಂ। ಶ್ರೀ ಗಣೇಶ ಶ್ರೀ ಗಣೇಶ ಶ್ರೀ ಗಣೇಶ ರಕ್ಷಮಾಂ॥2॥ ಓಂ ಗಣೇಶ ಓಂ ಗಣೇಶ ಓಂ ಗಣೇಶ ಪಾಹಿಮಾಂ। ಓಂ ಗಣೇಶ ಓಂ ಗಣೇಶ ಓಂ ಗಣೇಶ ರಕ್ಷಮಾಂ॥3॥

ಪಾಹಿ2 ಗಜಾನನ ಪಾರ್ವತಿ **ರಾಗ: ಸಿಂಧುಭೈರವಿ, ಏಕತಾಳ**

ಪಾಹಿ ಪಾಹಿ ಗಜಾನನ। ಪಾರ್ವತಿ ಪುತ್ರ ಗಜಾನನ॥ಪ॥ ಮೂಷಕ ವಾಹನ ಗಜಾನನ। ಮೋದಕ ಹಸ್ತ ಗಜಾನನ॥1॥ ವಾಮನರೂಪ ಗಜಾನನ। ಮಹೇಶ್ವರ ಪುತ್ರ ಗಜಾನನ॥2॥ ಚಾಮರಕರ್ಣ ಗಜಾನನ। ವಿಲಂಬಿತ ಸೂತ್ರ ಗಜಾನನ॥3॥ ವಿಘ್ನವಿನಾಶಕ ಗಜಾನನ। ತವಪಾದ ನಮಸ್ತೇ ಗಜಾನನ॥4॥

ಮಾತಂಗ ವದನ **ರಾಗ: ಶುದ್ಧಧನ್ಯಾಸಿ**

ಮಾತಂಗ ವದನ ಆನಂದ ಸದನ। ಮಹಾದೇವ ಶಿವ ಶಂಭೋ ನಂದನ॥ ಮಾಯ ವಿನಾಶಕ ಮೂಷಕ ವಾಹನ।

ಮಾತಾಮಹೇಶ್ವರಿ ಭವಾನಿ ನಂದನ॥ ಮಹಾಗಣಪತೇ ಮಂಗಳ ಶರಣಂ ಮಹಾಗಣಪತೇ ಮಂಗಳ ಶರಣಂ॥

ಶ್ರೀಗಣೇಶ ವಿನಾಯಕ **ರಾಗ: ಮೋಹನ**

ಶ್ರೀಗಣೇಶ ವಿನಾಯಕ ವಿಘ್ನವಿನಾಶಕ ವಿನಾಯಕ॥ ಮಂಗಳದಾಯಕ ವಿನಾಯಕ। ಭವಭಯನಾಶ ವಿನಾಯಕ॥ ಪರತಿಪುರೀಶ ವಿನಾಯಕ। ಶ್ರೀಗಣೇಶ ವಿನಾಯಕ॥

ಶ್ರೀ ಗಣೇಶ ಚರಣಂ ಶರಣಂ **ರಾಗ: ಹಂಸಧ್ವನಿ**

ಶ್ರೀ ಗಣೇಶ ಚರಣಂ ಶರಣಂ ಶ್ರಿತಜನ ಪಾಲಕ ಶರಣಂ ಶರಣಂ ಭಕ್ತಿರೂಪಧರ ಶರಣಂ ಶರಣಂ ಸಕಲ ವಿಘ್ನಹರ ಶರಣಂ ಶರಣಂ॥ ಕರಿಕಳಭಮುಖ ಶರಣಂ ಶರಣಂ। ಕರುಣಾಸಾಗರ ಶರಣಂ ಶರಣಂ ಪಾಶಾಂಕುಶಧರ ಶರಣಂ ಶರಣಂ ಭಕ್ತಯೋಜಿತಂ ಶರಣಂ ಶರಣಂ ಸಿದ್ಧಿ ಬುದ್ಧಿದಾಯಕಂ ಶರಣಂ ಶರಣಂ ಮಹಾಗಣಪತಿಂ ಶರಣಂ ಶರಣಂ ಯಜ್ಞಸೂತ್ರಧರಂ ಶರಣಂ ಶರಣಂ ಜ್ಞಾನ ವಿನಾಯಕಂ ಶರಣಂ ಶರಣಂ ಗೌರೀ ತನಯಾ ಶರಣಂ ಶರಣಂ ನಮಾಮಿ ಸತತಂ ಶರಣಂ ಶರಣಂ॥

ಹೇ ಗಜಾನನ **ರಾಗ: ಯಮನ್‌ಕಲ್ಯಾಣಿ**

ಹೇ ಗಜಾನನ ಹೇ ಗಜಾನನ। ವಿದ್ಯಾದೇವತೆ ಗಜಾನನ। ಈಶ್ವರ ತನಯಾ ಗಜಾನನ। ವಿಘ್ನನಿವಾರಕ ಗಜಾನನ। ವಿದ್ಯೆಯ ಕೊಡು ನೀ ಗಜಾನನ। ಕರುಣಿಸು ನಾಥ ಗಜಾನನ॥

ಕೀರ್ತನೆಗಳು

ಕರಿಕಲಭಮುಖಂದುಂಡಿ **ರಾಗ: ಸಾವೇರಿ, ರೂಪಕತಾಳ**

ಕರಿಕಲಭಮುಖಂದುಂಡಿ। ಗಣೇಶಂ ಭಜರೇ। ರೇ ಚಿತ್ತ॥ ಕಾವೇರಿ ತಟಸ್ಥಿತಂ। ಸಾವೇರಿ ರಾಗನುತಂ॥ಪ॥ ಹರಿಹರಾದಿ ಸಕಲ ದೇವ। ತಾರಾಧಿತ ಪದಾಂಬುಜಂ। ಗಿರಿಜಾ ತನುಜಂ ವಿಜಿತ ಮನಸಿಜಂ। ಗುರುಗುಹಾಗ್ರಜಂ॥1॥ ಮೂಲಾಧಾರಾ। ಚತುರ್ದಳ ಪಂಕಜ ಮಧ್ಯಸ್ಥಂ। ಮೋದಕ ಹಸ್ತಂ। ಮುನಿಜನ । ಕಮಲಸ್ಥಳ। ಪಾಲಚಂದ್ರ ಸುಮುಖಂ। ಕರುಣಾ ಸಾಂದ್ರಂ। ಪಾಶಾಂಕುಶಧರಂ। ಪದ್ಮ ಕರಂ। ಸುಂದರಂ। ನೀಲಗ್ರೀವ ಕುಮಾರ। ನೀರದ ಶೋಭಾಹಾರಂ। ಪಾಲಿತ ಭಕ್ತಂ ಧೀರಮ। ಪಾರಂ ವಾರಂ ವಾರಂ॥2॥

ಕರಿವದನಾ ಕರುಣಾಸದನ **ರಾಗ: ನಾಟ, ಆದಿತಾಳ**

ಕರಿವದನಾ ಕರುಣಾಸದನ। ಭಕ್ತಜನಾವನ ಗಜಾನನ॥ಪ॥ ಪಾರ್ವತಿ ಪುತ್ರ ಹರಕುಮಾರ ಸಾಧುಜನ ಹೃದಯ ವಿಹಾರ॥ಅ.ಪ॥ ಮೂಷಕವಾಹನ ಮೋದಕಪ್ರಿಯ ಲಂಬೋದರ ವಿದ್ಯಾದಾಯಕ। ಭಕ್ತಜನ ಅಭೀಷ್ಟ ಪ್ರದಾಯಕ ವಿಘ್ನೇಶ್ವರ ನಮೋ ನಮೋ॥ಚರಣ॥

ಗಜಾನನಯುತಂ ಗಣೇಶ್ವರಂ **ರಾಗ: ಚಕ್ರವಾಕ, ಏಕತಾಳ**

ಗಜಾನನಯುತಂ ಗಣೇಶ್ವರಂ ಭಜಾಮಿ ಸತತಂ ಸುರೇಶ್ವರಂ॥ಪ॥ ಅಜೇಂದ್ರ ಪೂಜಿತ ವಿಘ್ನೇಶ್ವರಂ ಗಣಾದಿಸನ್ನುತ ಪದಪದ್ಮ ಕರಂ ಕುಂಜರ ಭಂಜನ ಚತುರತರಕರಂ ಗುರುಗುಹಾಗ್ರಜಂ ಪ್ರಣವಾಕಾರಂ॥ಚರಣ॥

ಚಿಟ್ಟೆಸ್ವರ ಮಗರಿಸ ರಿಗಮಾ ಪಮಪದ ನಿರಿಸಾ। ಮಗರಿಸ। ನಿದಪದ ಪಮಗರಿ ಸನಿಸಾ ರಿಗಮಗ ರಿಸಪಮ ಪದನಿಪಾದನಿರಿ। ಸಾನಿದ। ನಿಸನೀ ದಪಮಗ ರಿಸರಿಗ ॥

ಗಿರಿರಾಜಸುತಾ ತನಯ **ರಾಗ: ಬಂಗಾಳ, ಆದಿತಾಳ**

ಗಿರಿರಾಜಸುತಾ ತನಯ ಸದಯ।।ಪ।। ಸುರನಾಥ ಮುಖಾರ್ಚಿತ ಪಾದಯುಗ ಪರಿಪಾಲಯಮಾಂ ಇಭರಾಜಮುಖ।।ಅ.ಪ।। ಗಣನಾಥ ಪರಾತ್ಪರ ಶಂಕರಾ। ಗಮ ವಾರಿನಿಧಿ ರಜನೀಕರ ಫಣಿರಾಜಕಂಕಣ ವಿಘ್ನನಿವಾರಣ ಶಾಂಭವ ಶ್ರೀ ತ್ಯಾಗರಾಜನುತ ।।ಚರಣ।।

ಪಂಚ ಮಾತಂಗ ಮುಖ ಗಣಪತಿ **ರಾಗ: ಮಲಹರಿ, ರೂಪಕತಾಳ**

ಪಂಚ ಮಾತಂಗ ಮುಖ ಗಣಪತಿ ನಾ ಪರಿಪಾಲಿತೋಽಹಂ ಸುಮುಖೇನ ಶ್ರೀ।।ಪ।। ಪಂಚಭೂತಾತ್ಮಕ ಪ್ರಪಂಚೋದಯಾದಿಕರಣ ವಿರಿಂಚಿಹರಿರುದ್ರನುತೇನ ಪಂಚವಕ್ತ್ರ ಶಿವಸುತೇನ।।ಅ।। ವರದಾಭಯ ಪಾಶ ಶೃಣಿಕಪಾಲದಂತ ಮೋದಕ ಮುದ್ಗಲಾಕ್ಷ ಮಾಲಾಕರೇಣ ಕಮಲಾಪುರವಿಹಾರೇಣ ಪುರುಹೂತಾದ್ಯಖಿಲದೇವ ಪೂಜಿತ ವಿಘ್ನೇಶ್ವರೇಣ ವರಗುರುಗುಹಸೋದರೇಣ ಸುರುಚಿರ ಲಂಬೋದರೇಣ ಕರುಣಾಂಗಗೌರತರೇಣ ಕಲಿಮಲ ಹರಣ ತರೇಣ।।ಚರಣ।।

ಪ್ರಣಮಾಮ್ಯಹಂ ಶ್ರೀ ಗೌರೀಸುತಂ **ರಾಗ: ಗೌಳ, ಆದಿತಾಳ**

ಪ್ರಣಮಾಮ್ಯಹಂ ಶ್ರೀ ಗೌರೀಸುತಂ ಫಣಿತಲ್ಪ ವಾಸುದೇವ ಭಕ್ತಂ ಸತತಂ।।ಪ।। ಗಣನಾಥಂ ಅಮರಬೃಂದ ಸೇವಿತಂ ಫಣಿಹಾರಭೂಷಿತಂ ಮುನಿಜನವಂದಿತಂ।।ಅ.ಪ.।। ಧೃತಚಾರು ಮೋದಕಂ ಗಜಮುಖಂ ಸಿತಕರಾಮಿತ ಗರ್ವ ಭಂಜಕಂ। ನತಲೋಕ ಸಂತೋಷ ದಾಯಕಂ। ಶೃತ ಭಕ್ತ ಪಾಲಕಂ ಸಿದ್ಧಿವಿನಾಯಕಂ।।ಚರಣ।।

ಪ್ರಸನ್ನ ಗಣಪತಿ ಮಾಂ ಪಾಹಿ **ರಾಗ: ಬಹುದಾರಿ, ರೂಪಕತಾಳ**

ಪ್ರಸನ್ನ ಗಣಪತಿ ಮಾಂಪಾಹಿ।।ಪ।। ಪಶುಪತೀ ಸುತ ವಸುಧೆಯೊಳ್ ಪೂಜಿತ।।ಅ।। ಪ್ರಣವರೂಪ ಕೃಷ್ಣ ಪಿಂಗಾಕ್ಷ ವಕ್ರತುಂಡ ವಿನಾಯಕ ಪುರಂದರಾದಿ ಸುರ ಸೇವಿತ ತ್ರಿಮಿಕೂಟಕ್ಷೇತ್ರ ಪರಿಪಾಲಿತ।।ಚ।।

ಭಜರೇ ಗಣನಾಥಂ ಮಾನಸಾ **ರಾಗ: ಹಿಂದೋಳ**

ಭಜರೇ ಗಣನಾಥಂ ಮಾನಸಾ ಭಜರೇ ಗಣನಾಥಂ।।ಪ।। ಭಜ ಗಣನಾಥಂ ಭಕ್ತ ಪ್ರದಾತಂ। ಸುಜನೋದ್ಧಾರಂ ದೈತ್ಯ ವಿದೂರಂ।।ಅ.ಪ.।। ಸಾಮಗಾನ ಸ್ತುತಿ ಪ್ರಿಯಕರ ತುಂಡಂ ಕೌಮಾರೀಸುತ ಭೂಸುರ ಪ್ರೀತಂ ಸಿಂಗಪುರದಿ ಕಲಿಕಾಮನಿವಾಸಂ। ಮಂಗಳ ಮೂರುತಿ ಶ್ರೀ ವಿಘ್ನೇಶಂ।।ಚರಣ।।

ಮಹಾಗಣಪತೇ ಪಾಲಯಾಶುಮಾಂ **ರಾಗ: ನಟನಾರಾಯಣಿ, ಆದಿತಾಳ**

ಮಹಾಗಣಪತೇ। ಪಾಲಯಾಶುಮಾಂ। ಮಾಯಾಮಯ ವಲ್ಲಭಾಪತೇ ಶ್ರೀ।।ಪ।। ಮಹಾ ನಟನಾರಾಯಣೀ ನಂದನ। ಮಾನಿತ ದೇವ ದೇವಕೀ ನಂದನ। ಮಹೇಶ್ವರ ಗುರುಗುಹ ಭಕ್ತ ಚಂದನ। ಮಾತಂಗ ವದನೇಂದ್ರಾದಿ ವಂದನ।।ಚರಣ।।

ಮಹಾಗಣಪತಿಂ ಮನಸಾ ಸ್ಮರಾಮಿ **ರಾಗ: ನಾಟ, ಏಕತಾಳ**

ಮಹಾಗಣಪತಿಂ ಮನಸಾ ಸ್ಮರಾಮಿ। ವಸಿಷ್ಠ ವಾಮದೇವಾದಿ ವಂದಿತಂ।।ಪ।। ಮಹಾದೇವಸುತಂ ಗುರುಗುಹನುತಂ। ಮಾರಕೋಟಿಪ್ರಕಾಶಂ ಶಾಂತಂ। ಮಹಾಕಾವ್ಯ ನಾಟಕಾದಿ ಪ್ರಿಯಂ। ಮೂಷಕ ವಾಹನ ಮೋದಕ ಪ್ರಿಯಂ।।ಚರಣ।।

ವಾತಾಪಿ ಗಣಪತಿಂ ಭಜೇಹಂ **ರಾಗ: ಹಂಸಧ್ವನಿ, ಆದಿತಾಳ**

ವಾತಾಪಿ ಗಣಪತಿಂ ಭಜೇಹಂ ವಾರಾಣಾಸ್ಯಂ ವರಪ್ರದಂ ಶ್ರೀ।।ಪ।। ಭೂತಾದಿ ಸಂಸೇವಿತ ಚರಣಂ ಭೂತ ಭೌತಿಕ ಪ್ರಪಂಚ ಭರಣಂ ವೀತರಾಗಿಣಂ ವಿನುತ ಯೋಗಿನಂ ವಿಶ್ವಕಾರಣಂ ವಿಘ್ನವಾರಣಂ।।ಅ.ಪ.।। ಪುರಾ ಕುಂಭಸಂಭವ ಮುನಿವರ-ಪ್ರಪೂಜಿತಂ ತ್ರಿಕೋಣ ಮಧ್ಯಗತಂ ಮುರಾರಿ ಪ್ರಮುಖಾದ್ಯುಪಾಸಿತಂ ಮೂಲಾಧಾರ ಕ್ಷೇತ್ರಸ್ಥಿತಂ ಪರಾದಿ ಚತ್ವಾರಿ ವಾಗಾತ್ಮಕಂ ಪ್ರಣವಸ್ವರೂಪ ವಕ್ರತುಂಡಂ ನಿರಂತರಂ ನಿಟಿಲಚಂದ್ರ ಖಂಡಂ ನಿಜವಾಮಕರ ವಿಧೃತೇಕ್ಷು ದಂಡಂ ಕರಾಂಬುಜ ಪಾಶ ಬೀಜಾಪೂರಂ ಕಲುಷ ವಿದೂರಂ ಭೂತಾಕಾರಂ ಹರಾದಿ ಗುರುಗುಹತೋಷಿತ ಬಿಂಬಂ ಹಂಸಧ್ವನಿ ಭೂಷಿತ ಹೇರಂಬಂ।।ಚರಣ।। ಚಿಟ್ಟೆಸ್ವರ ।। ಗಪಗಗರಿಸ ರಿಗರಿರಿಸನಿ ಪನಿಸರಿ । ಸಾ೯ ಸಾನಿಪ । ನಿಸಾಸ ಪನಿಸರಿ ।। ಗಪರಿಗಾಗ ಸರಿನಿಸಾಸ ಪನಿಸರಿ । ಗಪರಿಗ ಸರಿನಿಸ । ರಿಗಪಗ ಪಾಪಾ ।। ಗಪಗನಿಪಾರಿಗರಿಪಗಾ ಸರಿಸಗ । ರೀ ನಿಸರಿಗಪನಿ । ಸರಿಸನಿ ಪನಿಸರಿ ।। ಗರಿಗಸಾರಿಸನಿ ಪನಿಸರಿಸನಿಸಾ । ೯ ಸನಿಪಗಾ೯ ರಿ । ಸನಿಪಾ೯ ನಿಸರಿ ।।

ವಾರಣಮುಗ ವಾ (ತಮಿಳು) **ರಾಗ: ಹಂಸಧ್ವನಿ, ರೂಪಕತಾಳ**

ವಾರಣಮುಗ ವಾ ತುಣ್ಣೈವರುವಾಯ್ ಅರುಳ್‌ವಾಯ್ ದಯವಾಯ್।।ಪ।। ಆರಣ ಪೊರುಳಾನ ಕಂದ ಗಾನಮುದತ್ತಿರ್ಕುಂ ಕರುಣಾಮುದ ಮುದವಿಯರುಳ್।।ಅ.ಪ.।। ಇನ್ನಿಸೈಯಿಲ್ ಇಲಕಿಯಂ ಅರಿಯಂ ತಮಿಳ್ ಅರಿವೇದುಂ ಇಂದ್ರಿ ಕಣ್ಣಲವಿಯ್ಯೈಗಾ ಕಂದಕಾಣಾಮುದನನ್ ನೂಲ್ಯೈ ಉಣ್ಣುಂ ಕವಿಕುಂಜರದಾಸನ್ ನಾನ್ ಉನ್ನರುಳ್‌ಕೊಂಡೆ ಪಣ್ಣ ತುಣಿಂದೇನ್ ಮುನ್ನವನೇ ನೀ ಮುನ್ನೈನಿನ್ರಾಲ್ ಮುಡಿಯಾದದೊಂಡ್ರಿಲ್ಲೈ ಆದಲಾಲ್ ಅದಿವೇಗಮಾಯ್ ಅರುಳ್‌ವಾಯ್।।ಚರಣ।।

ವಿನಾಯಕ ನಿನ್ನುವಿನಾ ಬ್ರೋಚುಟಕು **ರಾಗ: ಹಂಸಧ್ವನಿ, ಆದಿತಾಳ**

ವಿನಾಯಕ ನಿನ್ನುವಿನಾ ಬ್ರೋಚುಟಕು। ವೇರೆವರುರಾ ವಿಘ್ನರಾಜ।।ಪ।। ಅನಾಥ ರಕ್ಷಕ ನೀವೇಕಾದ। ಆದರಿಂಚಿನನ್ನು ಬ್ರೋವರಾದಾ।।ಅ.ಪ.।। ಸರಸೀರುಹಾಸನ ನುತ ಚರಣ। ಸತತಮು ಶೃತಜನ ಸಂಕಟಹರಣ। ಪರಮ ಕೃಪಾಸಾಗರ ವರಸುಗುಣ। ಪಾಲಿತಜನ ಗೋಪಾಲದಾಸನುತ।।ಚರಣ।।

ವಿನಾಯಕನೇ ವಿನ್ನೈ (ತಮಿಳು) **ರಾಗ: ಸಿಂಹೇಂದ್ರಮಧ್ಯಮ**

ವಿನಾಯಕನೇ ವಿನ್ನೈ ತೀರ್ಪವನೇ ವೇಳ ಮುಗತ್ತೋನೇ ಜ್ಞಾನಮುದಲ್‌ವನೇ।।ಪ।। ಗುಣನಿಧಿಯೇ ಗುರುವೇ ಶರಣಂ ಕುರೈಗಳ್ ಕಲೆಯ ಇದುವೆ ತರುಣಂ।।ಅ।। ಉಮಾಪತಿಯೆ ಉಲಗಂ ಎನ್ರಾಲ್ ಒರು-ಸುಟ್ರಿನಿಲೆ ವಲಮುಂ ವಂದಾಯ್ ಗಣನಾಥನ್ನೈ ಮಾಂಗನಿಯ್ಯೈ ವೆಂಡ್ರಾಲ್।।ಚರಣ।।

ವಂದೇಽನೀಶಮಹಂ ವಾರಣವದನಂ **ರಾಗ: ಹಂಸಧ್ವನಿ, ಆದಿತಾಳ**

ವಂದೇಽನೀಶಮಹಂ ವಾರಣವದನಂ ನಂದೀಶ ವಾಹನ ವರನಂದನಂ।।ಪ।। ಮಂದಾರು ಮಂಡಲ ವಿಘ್ನನಿವಾರಣಂ ಬೃಂದಾರಕೇಂದ್ರ ವಿವಂದಿತ ಚರಣಂ।।ಅ.ಪ.।। ಭಾಸಮಾನ ಪಾಶಾಂಕುಶಧರಂ ಭೂಸುರಾದಿ ಪಾಲನವರಂ ಭಾಸುರಮಣಿಭೂಷಿತ ಕಂಧರಂ ವಾಸುದೇವ ಚರಣಾರ್ಚಿತ ತತ್ಪರಂ।।ಚರಣ।।

ಶಕ್ತಿಸಹಿತ ಗಣಪತಿಂ ಶಂಕರಾದಿ **ರಾಗ: ಶಂಕರಾಭರಣ, ಆದಿತಾಳ**

ಶಕ್ತಿಸಹಿತ ಗಣಪತಿಂ ಶಂಕರಾದಿ ಸೇವಿತಂ ವಿರಕ್ತ ಸಕಲ ಮುನಿವರ ಸುರರಾಜ ವಿನುತ ಗುರುಗುಹಂ।।ಪ।। ಭಕ್ತಾದಿ ಪೋಷಕಂ ಭವಸುತಂ ವಿನಾಯಕಂ ಭುಕ್ತಿ ಮುಕ್ತಿ ಪ್ರದಂ ಭೂಷಿತಾಂಗಂ ರಕ್ತ ಪಾದಾಂಬುಜಂ ಭಾವಯಾಮಿ।।ಚರಣ।।

ಶ್ರೀ ಗಣಪತಿನಿ ಸೇವಿಂಚರಾರೆ **ರಾಗ: ಸೌರಾಷ್ಟ್ರ, ಆದಿತಾಳ**

ಶ್ರೀ ಗಣಪತಿನಿ ಸೇವಿಂಚರಾರೆ, ಶ್ರಿತಮಾನವುಲಾರಾ॥ಪ॥ ವಾಗಾಧಿಪತಿ ಸುಪೂಜಲ ಚೇಕೊನಿ ಬಾಗ ನಟಿಂಪುಚುನು ವೆಡಲಿನ॥ಅ.ಪ.॥ ಪನಸ ನಾರಿಕೇಳಾದಿ ಜಂಬೂ-ಫಲಮು ಲಾರಗಿಂಚಿ ಘನತರಂಬುನನು ಮಹಿಪೈ ಪದಮುಲು। ಘಲ್ಲು ಘಲ್ಲುನನುಂಚಿ ಅನಯಮು ಹರಿ ಚರಣಯುಗಮುಲ ಹೃದಯಾಂಬುಜಮುನ ನುಂಚಿ ವಿನಯಮುನನು ತ್ಯಾಗರಾಜು ವಿನುತುನಿ ವಿವಿಧಗತುಲಧಿತ್ತಳಾಂಗುಮನಿ ವೆಡಲಿನ॥ಚರಣ॥

ಶ್ರೀಗಣೇಶ ಶರಣಂ ಗಜಾನನ (ತಮಿಳು) **ರಾಗ: ತಿಲಂಗ್, ಆದಿತಾಳ**

ಶ್ರೀಗಣೇಶ ಶರಣಂ ಗಜಾನನ। ದೇವರ್ ಮುನಿವರ್ ಪಣಿಯುಂ ದಯಾಕರ॥ಪ॥ ನಾಗಾಭರಣನೆ ನಾನ್‌ಮರೈ ಪೋಟ್ರುಂ ನಾಮನೆ ಪ್ರಣವರೂಪನೇ ಜಯ॥ಅ.ಪ.॥ ಪಾದಂನಂಬುಂ ರಾಮದಾಸ ವರದನೆ। ಮೋದಕಪ್ರಿಯನೆ ಗೌರೀಕುಮಾರನೆ। ಆದಿದೇವ ನಿನ್ ಅರುಳಿಲ್ಲೈ ಎನ್ರಾಲ್ ವೇದನುಂ ಮಾಲುಂ ಸೈತೊಳಿಲ್ ಉಂಡೋ॥ಚರಣ॥

ಶ್ರೀ ಮಹಾಗಣಪತಿರವತುಮಾಂ **ರಾಗ: ಗೌಳ, ಮಿಶ್ರಛಾಪುತಾಳ**

ಶ್ರೀ ಮಹಾಗಣಪತಿರವತುಮಾಂ ಸಿದ್ಧಿ ವಿನಾಯಕೋ ಮಾತಂಗಮುಖ॥ಪ॥ ಕಾಮಜನಕ ವಿಧೀಂದ್ರ ಸನ್ನುತ ಕಮಲಾಲಯ ತಟನಿವಾಸೋ ಕೋಮಲತರ ಪಲ್ಲವ ಪದಕರ ಗುರುಗುಹಾಗ್ರಜಃ ಶಿವಾತ್ಮಜಃ॥ಅ.ಪ.॥ ಸುವರ್ಣಾಕರ್ಷಣ ವಿಘ್ನರಾಜೋ ಪಾದಾಂಬುಜೋ ಗೌರವರ್ಣ ವಸನಧರೋ ಫಾಲಚಂದ್ರೋ ನರಾದಿ ವಿನುತ ಲಂಬೋದರೋ ಕುವಲಯಸ್ವವಿಷಾಣ ಪಾಶಾಂಕುಶ ಮೋದಕ ಪ್ರಕಾಶಕರೋ ಭವಜಲಧಿ ನಾವೋ ಮೂಲ ಪ್ರಕೃತಿ ಸ್ವಭಾವ ಸ್ಸುಖತರೋ ರವಿಸಹಸ್ರ ಸನ್ನಿಭದೇಹೋ ಕವಿಜನನುತ ಮೂಷಕವಾಹೋ ಅವನತ ದೇವತಾ ಸಮೂಹೋ ಅವಿನಾಶ ಕೈವಲ್ಯ ಗೇಹೋ॥ಚ॥

ಸಿದ್ಧಿವಿನಾಯಕ ಪಾದ ನಮಸ್ತೆ **ರಾಗ: ಹಮೀರ್ ಕಲ್ಯಾಣಿ**

ಸಿದ್ಧಿವಿನಾಯಕ ಪಾದ ನಮಸ್ತೆ। ಸಕಲ ಜನಾರ್ಚಿತ ಪೂಜಿತಂ॥ಪ॥ ವಿಘ್ನೇಶ್ವರ ಚರಣಾರವಿಂದಂ। ಶ್ರೀಗಣೇಶಂ ಪ್ರಕಾಶ ದೇವಂ॥ಅ.ಪ.॥ ಶಾಂತ ಸ್ವರೂಪೇಣ ಸಿದ್ಧಿ ಪ್ರದಾಯಕಂ। ಸಿಂಧೂರವರ್ಣಂ ವಕ್ರತುಂಡಂ। ಮೂಷಕವಾಹನ ಮೋದಕ ಹಸ್ತಂ। ಜ್ಞಾನ ಪ್ರದಾಯಕಂ ಗಿರಿಜಾ ನಂದನಂ॥ಚರಣ॥

ಹರತನಯ ಶ್ರೀ ಸಿದ್ಧಿವಿನಾಯಕ **ರಾಗ: ನಾಟ, ಆದಿತಾಳ**

ಹರತನಯ ಶ್ರೀ ಸಿದ್ಧಿ ವಿನಾಯಕ ವರ ಕರಿರಾಜವದನ ಮೆರೆವೇಕದಂತಧರ ಕರುಣಾಭರಣ॥ಪ॥ ಸುರಮುನಿ ಸೇವಿತ ಲಂಬೋದರ ಪರಿಶೋಭಿಪ ಪಾಶಾಂಕುಶಧರ॥ಅ.ಪ.॥ ಸಕಲ ವಿಘ್ನಹರ ಸಕಲವಿದ್ಯಾಪ್ರದ ಶಕುತ ನೀನೆನ್ನನು ಪಾಲಿಪುದೊ ಅಕಳಂಕ ಮಹಿಮ ಪುರುಷೋತ್ತಮನ ಭಕುತ ಶಿರೋಮಣಿ ವಿಖ್ಯಾತ॥ಚರಣ॥

ಶಿಶುಗೀತೆಗಳು

ಆನೆಯ ಸೊಂಡಿಲ ಗಣಪ **ರಾಗ: ಜಾನಪದ ಧಾಟಿ**

ಆನೆಯ ಸೊಂಡಿಲ ಗಣಪ ಕೈಯನು ಮುಗಿವೆನು ಗಣಪ॥ ವಿದ್ಯೆಯ ಕರುಣಿಸು ಗಣಪ ಬುದ್ಧಿಯ ಬೆಳಗಿಸು ಗಣಪ॥ ವಿಘ್ನವ ಕಳೆಯುತ ಗಣಪ ಜ್ಞಾನವ ಕೊಡು ನೀ ಗಣಪ॥ ವರವನು ಕರುಣಿಸು ಗಣಪ ಮುಗಿವೆನು ಕೈಯನು ಗಣಪ॥

ಕಡುಬಿಗೆ ತುಪ್ಪ ಹಾಕಿದೆನಪ್ಪ **ರಾಗ: ಕುರಂಜಿ**

ಕಡುಬಿಗೆ ತುಪ್ಪ ಹಾಕಿದೆನಪ್ಪ। ಸಾವಿರ ತಪ್ಪ, ಮನ್ನಿಸೊಅಪ್ಪ। ಓಗ್ಗೊಡು ಓ ಗಣಪತಿ ಬಪ್ಪ। ಹೂಗ್ಗುಡು ನೀ ಗಣಪತಿ ಬಪ್ಪ॥ ಮೂಡಣದಲ್ಲಿ ದಿನಕರ ಬರುವ ಶುಭಕರ ವೇಳೆ। ಪರಿಮಳ ಚೆಲ್ಲುವ ಮಲ್ಲಿಗೆ ಸಂಪಿಗೆ ಹೂಗಳ ಮಾಲೆ।

ತಂದಿರುವೆ ನಿನಗಾಗಿ ನಮಿಸಿರುವೆ ತಲೆಬಾಗಿ ಬಾರಪ್ಪ।। ಬಾಗಿಲಿಗಪ್ಪ ತೋರಣವಪ್ಪ ನೀ ಬರಲೆಂಬ ಕಾರಣವಪ್ಪ। ತಂದರೆ ಕಪ್ಪ ಕಾಣಿಕೆಯಪ್ಪ ಓಗೊಡು ಓ ಗಣಪತಿ ಬಪ್ಪ। ಹೂಗ್ಬುಡು ನೀ ಗಣಪತಿ ಬಪ್ಪ।। ಹುಣ್ಣಿಮೆ ಕಳೆದು ಮೂರನೆ ದಿವಸ ಕಾಯುವೆವಪ್ಪ। ತಿಂಗಳು ತಿಂಗಳು ಸಂಕಷ್ಟಸ್ತುತಿ ಮಾಡುವೆವಪ್ಪ। ಗಣಪನೆ ನಾಮ ಹೊತ್ತು ಉಣುವೆವು ಒಂದೇ ಹೊತ್ತು।। ಅಂಗೈ ದಪ್ಪ ಹೋಳಿಗೆಯಪ್ಪ। ಹೋಳಿಗೆಗಪ್ಪ ಹಾಲಿದೆಯಪ್ಪ। ಸಾವಿರತಪ್ಪ ಮನ್ನಿಸೋಯಪ್ಪ। ಓಗೊಡೊಯಪ್ಪ।। ಮನೆಯ ಮಕ್ಕಳು ಓದಲು ಬರೆಯಲು ಮನಸು ಕೊಡಪ್ಪ। ಮನದಲಿ ಶಾಂತಿ ಸುಖವು ದೊರಕಲು ಪ್ರೀತಿ ಕೊಡಪ್ಪ। ಧರ್ಮದ ವೇಳೆ ಅಪ್ಪ ಮನಮುದ ಮಾಡು ಅಪ್ಪ। ನಮ್ಮಪ್ಪ।।

ಗಜಮುಖ ಕುಣಿ ಕುಣಿದಾಡಿದನೆ ಗೆಜ್ಜೆ ರಾಗ: ಶ್ರೀರಾಗ

ಗಜಮುಖ ಕುಣಿ ಕುಣಿದಾಡಿದನೆ। ಗೆಜ್ಜೆ ಘಲು ಘಲು ಘಲುರೆಂದೋಡಿದನೆ ನಲಿದಾಡಿದನೆ, ನಾಟ್ಯವಾಡಿದನೆ, ಶ್ರುತಿ ಹೂಡಿದನೆ।।ಪ।। ಉಡಿದಾರ ಉಡಿಗಂಟೆ ಉಡಿಯಲ್ಲಲ್ಲಾಡುತ। ಕಡುಬು ಕಜ್ಜಾಯವ ತಾರೆನ್ನುತಾ ಇಡಿಗಾಯೊಂಬೈನೂರು ಲಕ್ಷ ಇಡಿಗಾಯಿ ಬೇಡುತ ಕಡಲೆ ಉಂಡಲಿಗೆ ತಾರೆನ್ನುತಾ ತಂದು ತೋರೆನ್ನುತ।।1।। ಪಂಚರತ್ನದಾರತಿ ಮುಕುಟವಲ್ಲಾಡುತ ಪಂಚಭಕ್ಷ್ಯ ಪರಮಾನ್ನವ ತಾರೆನ್ನುತಾ। ವಂಚನೆ ಇಲ್ಲದೆ ಒಂಬೈನೂರು ಕಂಡುಗದ ಪಂಚಕಜ್ಜಾಯವ ತಾರೆನ್ನುತಾ।।2।। ಮಿಕ್ಕಿದ್ದೆಲ್ಲವ ತಿಂದು ಕೋರೆಮೀಸೆ ತಿರುವುತ ಸಂತುಷ್ಟವಾಯಿತೆನ್ನುತಾ ಬಿಟ್ಟೆನೆನ್ನುತಾ। ಅಷ್ಟೂ ಕಜ್ಜಾಯವ ಮಧ್ಯಾಹ್ನಕೆ ಮೆದ್ದು ಹೊಟ್ಟೆ ಭಾರಕೆ ಇಲಿ ಕೀಚೆನ್ನುತಾ ಕೀಚ್ ಪಾಚ್ ಎನ್ನುತಾ।।3।।

ಗಣಪ ನಿನಗೆ ಯಾಕೆ

ಗಣಪ ನಿನಗೆ ಯಾಕೆ ಇಂಥಹ ಉದ್ದ ಸೊಂಡಿಲು। ನೆಗಡಿ ಬಂದರೆಷ್ಟು ಕಷ್ಟ ಒರೆಸಿಕೊಳ್ಳಲು।। ದೊಡ್ಡ ಹಾವು ಯಾಕೆ ಬೇಕು ಹೊಟ್ಟೆ ಸುತ್ತಲು। ದುಡ್ಡಿಲ್ಲವೆ ಪಾಪ ನಿನಗೆ ಬೆಲ್ಟು ಕೊಳ್ಳಲು।। ಹೇಗಪ್ಪ ಒಪ್ಪಿದೆ ನೀ ಇಲಿಸವಾರಿಗೆ। ಇಲ್ಲವೇ ಕೈಲಾಸದಲ್ಲಿ ಬೇರೆ ಸಾರಿಗೆ।।

ಗಣೇಶ ಬಂದ ಕಾಯ್‌ಕಡುಬು ರಾಗ: ಸಿಂಧೂಭೈರವಿ

ಗಣೇಶ ಬಂದ ಕಾಯ್‌ಕಡುಬು ತಿಂದ। ಇನ್ನು ಬೇಕು ಎಂದ। ಹೊಟ್ಟೆ ಬಿರಿಯ ಮೆದ್ದ। ಕಾಯಿ ಕಡುಬಿನ ಜೊತೆಗೆ ಕರಿಗಡುಬನ್ನೂ ಬಾರಿಸ್ದ। ಐದ್ ಸುತ್ತಿನ ಚಕ್ಲೀನ ಹೊಟ್ಟೆಯೊಳಗೆ ತೂರಿಸ್ದ। ಸಿಹಿ ಹೂರಣ ತುಂಬಿದ್ದ। ಒಂದು ತಟ್ಟೆ ಮೋದಕ। ಹೊಟ್ಟೇ ಮೂಲೇಲ್ ಇಳ್ಸಿ। ಕುಡಿದ ಕೊಳಗ ಪಾನಕ। ಹೊಟ್ಟೆ ಭಾರ ಆಗ್ಹೋಯ್ತು। ನಡಿಯೋಕೆ ಆಗದೆ ಹೋಯ್ತು। ಅಲ್ಲೇ ಒಂದು ಇಲೀ ಮರಿ। ಸಂತೆಗೆ ಹೋಗ್ತಾ ಇತ್ತು। ಡೊಳ್ಳು ಹೊಟ್ಟೆ ಗಣಪ। ಇಲೀ ಮೇಲೆ ಕೂತ। ಸುಮ್ನೆ ಇರದೆ ಇಲಿಗೆ ಕೊಟ್ಟ ಎರಡು ಲಾತ। ಇಲಿಗೆ ಕೋಪ ಬಂತು। ಕೆಳಕ್ಕೆ ಕೊಡವಿ ಓಡ್ತು। ಗಣಪನ ಹೊಟ್ಟೆ ಒಡೆದು। ಕಡುಬು ಚೆಲ್ಲಿ ಹೋಯ್ತು। ಚೆಲ್ಲಿದ ಕಡುಬಿನ್ ಎತ್ತಿ ಗಣಪ। ಹೊಟ್ಟೆ ಒಳಗೆ ಹಾಕ್ದ। ಅಲ್ಲೇ ಮಲಗಿದ ಹಾವನ್ನು। ಹೊಟ್ಟೆ ಸುತ್ತ ಬಿಗಿದ। ಭಲೆ ಭಲೆ ಗಣಪ। ತಿಂಡಿಪೋತ ಥೊಣಪ। ಕಡುಬು ಬೇಕಾ ಇನ್ನೂನೂ। ಮನೆ ಹತ್ರ ಬಾರಪ್ಪ।

ಗಣಪತಿ ಬಂದನು ನೋಡಮ್ಮಾ ರಾಗ: ಪುನ್ನಾಗವರಾಳಿ

ಗಣಪತಿ ಬಂದನು ನೋಡಮ್ಮಾ। ಪಂಚಕಜ್ಜಾಯವ ನೀಡಮ್ಮ।।ಪ।। ಇಲಿಮರಿ ಕುಳಿತಿದೆ ಅವನಬಳಿ। ಕಣ್ ಕಣ್ ಬಿಡುತಿದೆ ಪಿಳಿಪಿಳಿ।। ಬಿಲದಲಿ ಇಲಿಯು ಶೋಭಿಪುದು। ಮುತ್ತಿನ ಮಾಲೆಯು ರಂಜಿಪುದು।। ಕರದಾ ಮೋದಕ ನೀಡೆಂದು। ಮುಗುಳು ನಗೆಯ ಬೀರುವುದು।। ಅಜ್ಜನು ಪೂಜೆಯ ಮಾಡುವನು। ಡುಂಟಕ ಟಕಡುಂ ಹೊಡೆಯುವೆನು।। ಹೂಗಳ ನೀಡಿ ಕೈ ಮುಗಿವೆ। ವಿದ್ಯಾಬುದ್ಧಿಯ ನೀಡೆಂದು।। ಹಬ್ಬವು ಬರಲಿ ಅನುದಿನವು। ಶಾಲೆಗೆ ಸಿಗಲಿ ರಜದಿನವು।।

ಗಣೇಶರಾಯ ಮುಗಿವೆನು ಕೈಯ ರಾಗ: ಜಾನಪದ ಧಾಟಿ

ಗಣೇಶರಾಯ ಮುಗಿವೆನು ಕೈಯ ವಿದ್ಯೆಯ ಕೊಡು ನಮಗೆ ಬುದ್ಧಿಯ ಕೊಡು ನಮಗೆ।। ಇಲಿಯ ಮೇಲೆ ಕುಳಿತು

ಚೌತಿಯ ದಿನ ಬರುವೆ। ಮೊದಲು ಊಟ ಮಾಡುವೆ ಹೊಟ್ಟೆಗೆ ಹಾವು ಸುತ್ತುವೆ।। ಜಾರಿಬಿದ್ದ ಗಣಪ ನೋಡಿನಕ್ಕ ಚಂದ್ರಪ್ಪ। ಶಾಪಕೊಟ್ಟ ಗಣಪ ವಿದ್ಯೆ ಕೊಡು ನಮ್ಮಪ್ಪ।।

ಗೆಜ್ಜೆಯ ಕಟ್ಟಿದ ಗಿಡ್ಡು ಗಣಪ — ರಾಗ: ಪುನ್ನಾಗವರಾಳಿ

ಗೆಜ್ಜೆಯ ಕಟ್ಟಿದ ಗಿಡ್ಡು ಗಣಪ ಹೆಜ್ಜೆಯ ಹಾಕಿದ ಲಜ್ಜೆಯ ಬಿಟ್ಟು ಬನ್ನಿರಿ ಎಂದು ನಮ್ಮನು ಕೂಗಿದ ಗಣಪ ನಮ್ಮನು ಕೂಗಿದ।।ಪ।। ಮಾನವರು ನೀವೆಂದ ದೇವ ದೇವನು ನಾನೆಂದ। ಮನಸಿನ ನೋವ ಬಿಡಿಸೋದೈವ ನಾನೆ ನಾನೆಂದ।।1।। ನನ್ನಂತೆ ನೀವು ಹಾಡಿರಿ ನನ್ನಂತೆ ನೀವು ಪಾಡಿರಿ। ನನ್ನಂತೆ ನೀವು ಹಾಡಿ ಪಾಡಿದರೆ ನನ್ನಂತೆ ನೀವು ಆಗುವಿರಿ।।2।।

ಚಂದ್ರ ನೋಡಿ ನಕ್ಕ ಅಂತ

ಚಂದ್ರ ನೋಡಿ ನಕ್ಕ ಅಂತ। ಯಾಕೀಷ್ಟೊಂದು ಕೋಪ।। ಚಂದ್ರನ ಹಲ್ಲು ಮುರಿಯೋದು ಬಿಟ್ಟು। ನಿನ್ನ ಹಲ್ಲ ಮುರ್ದ್ಯ ಬೆಪ್ಪ।।1 ಚೌತಿದಿನ ಚಕ್ಲಿ-ಕಡುಬು। ತಿಂದ ಹಿಗ್ಗು ನಮಗೂ। ಹಲ್ಲಿಲ್ವಲ್ಲ ಹೇಗೂ ನಿಂಗೂ। ಮೂಲೇಲಿ ಸುಮ್ನೆ ಕುತ್ಕೋ।।2।।

ಡೊಳ್ಳು ಹೊಟ್ಟೆ ಗಣಪ

ಡೊಳ್ಳು ಹೊಟ್ಟೆ ಗಣಪ। ನಿನ್ನ ಹೊಟ್ಟೆ ಯಾಕೆ ದಪ್ಪ।। ಸಿಕ್ಕಿದ್ದೆಲ್ಲಾ ತಿಂದು ತಿಂದು। ದಪ್ಪಾ ಆಯ್ತೇನಪ್ಪಾ।।1।। ಅಮ್ಮನ ಮಾತ್ನ ಕೇಳ್ದೇನೇ। ಕುಡದ್ಯಾ ಹಂಡೆ ನೀರು।। ಅದ್ಕೇ ನೋಡು ನೆಗಡಿ ಬಂದು। ಉದ್ದ ಆಯ್ತು ಮೂಗು।।2।। ಹಾವನ್ ಯಾಕೆ ಹೊಟ್ಟೆಗೆ ಬಿಗ್ದೆ। ಅಯ್ಯೋ ಪೆದ್ದೆ ಮಂಕೆ।। ಹುಷಾರಪ್ಪಾ ಹುಷಾರ್। ಕಚ್ಚೀತಪ್ಪ ಜೋಕೆ।।3।। ಭಾರಿ ಠೊಣಪ ನೀನು ಅಂತ। ಗೊತ್ತಿಲ್ವೇನೋ ಗಣಪ। ಸಣಕಲ್ ಕಡ್ಡಿ ಇಲಿಮೇಲೆ ಕೂತ್ರೆ। ನೋವ್ವಾಗಲ್ವೆ ಪಾಪ।।4।।

ನಮ್ಮ ಗಣಪನ ಹಬ್ಬ ಚಂದವೊ — ರಾಗ: ಜಾನಪದ ಧಾಟಿ

ನಮ್ಮ ಗಣಪನ ಹಬ್ಬ ಚಂದವೊ। ಅದು ನೋಡಲೂ ಬಹು ಮಂದಿಯೂ ಒಟ್ಟು ಕೂಡುವೆವು ಭಜನೆ ಮಾಡುವೆವು। ಎಲ್ಲರ ಹರಸಲು ನೀ ಬಾರಯ್ಯಾ ।।ಪ।। ಲಂಬ ಉದರರದ ಗಜಮುಖನೇ। ಅಂಬಾ ದೇವಿಯ ಸುಕುಮಾರನೇ। ನೀನು ಓಡೋಡಿ ಬಾ। ಭಕ್ತರ ಮೊರೆ ಕೇಳಿಬಾ। ನಮ್ಮ ಪ್ರೀತಿಯ ಕರೆಗೋಡಿಬಾ।।1।। ಉಂಡೆ ಚಕ್ಕುಲಿ ಕರಿಗಡುಬು। ತಿಂದು ಕೈ ಬಾಯಿ ನಿನಗಾಯಾಸ। ನೀನು ಓಡೋಡಿ ಬಾ ಭಕ್ತರ ಮೊರೆಕೇಳಿಬಾ। ನಮ್ಮ ಪ್ರೀತಿಯಾ ಕರೆಗೋಡಿ ಬಾ।।2।। ನಕ್ಕಾಗ ಚಂದ್ರಂಗೆ ಶಾಪವನು। ಅಂದು ಕೊಟ್ಟಂಥ ಮಹಾವೀರನು। ಸರ್ಪಭೂಷಣ ಬಾ ...। ವಿಘ್ನರಾಜನೇ ಬಾ .... ಕಬ್ಬಿನ ಕೋಲನ್ನೂರುತ್ತಾ ಬಾ।।3।।

ಪುಟ್ಟು ಗಣೇಶ ಪುಟ್ಟಾಣಿ ಗೌರಿ — ರಾಗ: ಶ್ರೀ

ಪುಟ್ಟು ಗಣೇಶ ಪುಟ್ಟಾಣಿ ಗೌರಿ। ಬಗೆ ಬಗೆ ಬಣ್ಣದ ಹೂವುಗಳು। ಪೇಟೆಯ ತುಂಬ ತುಂಬಿದೆ ಹೂವು। ಬನ್ನಿರಿ ಎನ್ನುತ ಕರೆಯುವರು।। ಗೌರಮ್ಮ ನಿನಗೆ ಜರತಾರಿ ಸೀರೆ। ಮೊರದಲಿ ಬಾಗಿನ ತಂದಿಹೆವು। ಗಣಪತಿ ಕೊರಳೊಳು ಕಡುಬಿನ ಹಾರ।ಇಲಿಯನ್ನೇರಿ ಹಾಕುತ ಭಾರ। ವಿದ್ಯಾಗಣಪನೆ ಬುದ್ಧಿಯ ನೀಡೋ। ಅಕ್ಕರೆಯಿಂದೆಮ್ಮನು ಕಾಪಾಡೊ।।

ಬಾ2 ಬಾರಣ್ಣ ಓ ಗಣಪಣ್ಣ — ರಾಗ: ಮಾಂಡ್

ಬಾ ಬಾ ಬಾರಣ್ಣ ಓ ಗಣಪಣ್ಣ ಚೌತಿಯ ಹಬ್ಬಕೆ ಬಾ ಮನೆಗೆ। ನೀ ಬಂದರೆ ನಾನಿರಿಸುವೆ ನಿನ್ನನ್ನು ಸಿಂಗರಿಸಿದ ಮಂಟಪದೊಳಗೆ।। ಅಂದದ ಸೊಂಡಿಲು ಇರಬೇಕಣ್ಣ ಇಲಿಯನು ಕರೆತರಬೇಕಣ್ಣ। ಕಂದನಕರೆ ಎನ್ನುತ ನೀ ಬರದಿರೆ ಕೆಂಡದ ಕೋಪವು ಬಹುದಣ್ಣ।। ಅಪ್ಪನು ಅಮ್ಮನು ನಾನು ಎಲ್ಲರು ನಿನಗೆ ಸ್ವಾಗತವೀಯುವೆವು। ತಪ್ಪದೆ ಬಗೆಬಗೆ ಭುಕುತಿಗಳಿಂದಲಿ ನಿನ್ನಯ ಪೂಜೆಯ ಮಾಡುವೆವು।। ಸಕ್ಕರೆಯಿಂದಲಿ ಮಾಡಿದ ವಿಧವಿಧ ಕಜ್ಜಾಯಗಳ ನೀಡುವೆವು।

ಚಕ್ಕುಲಿ ವಡೆ ಮೋದಕ ಪಾಯಸಗಳ ಔತಣದೂಟವ ಸಲಿಸುವೆವು।। ಕಡಲೇಪುರಿಗಳ ತಿನ್ನಲು ಕೊಡುವೆವು ನಿನ್ನ ಪ್ರಿಯಇಲಿರಾಯನಿಗೆ। ಬಡವರ ಒಣಉಪಚಾರಗಳೆನ್ನದೆ ಖಂಡಿತಾ ಬಾ ನಮ್ಮಯ ಮನೆಗೆ।।

ಬಾ ಬೆನಕ ಪೂಜಿಸುವೆ — ರಾಗ: ಹಂಸಧ್ವನಿ

ಬಾ ಬೆನಕ ಪೂಜಿಸುವೆ ಬಾಗಿನಕೆ ಕಡುಬೀವೆ। ಎಡರುಗಳ ತೊಡರುಗಳ ಬಿಡಿಸಿ ಕಾಪಾಡಯ್ಯ।।1।। ವೃಷಭವಿದೆ ಸಿಂಹವಿದೆ ಇಲಿಯನೇರಿದೆ ಏಕೆ? ಮನ್‌ಮನೋರಥವನೇರಿ ಸಂಚರಿಸು ಗಣಪಯ್ಯ।।2।। ಏಕದಂತನೆ ನಿನಗೆ ಏಕವಿಂಶತಿ ದೂರ್ವೆ। ರಕ್ತ ಚಂದನ ಬೆರೆಸಿ ಭಕ್ತಿಯೊಳಗರ್ಪಿಸುವೆ।।3।। ಸೊಂಡಿಲಿಗೆ ತಂದೀವೆ ಉಂಡಲಿಗೆ ಮೋದಕವ। ಉಂಡು ಕರುಣಿಸು ಎನ್ನ ಸಂದ ಭಕ್ತಿಯೊಳ್ ಇಂದು।।4।।

ಬಾರೋ3 ಗಣಪ ಸೊಂಡಿಲು — ರಾಗ: ಶಂಕರಾಭರಣ

ಬಾರೋ ಬಾರೋ ಬಾರೋ ಗಣಪ। ಸೊಂಡಿಲು ಮೇಲಕೆ ಎತ್ತಿಕೊಂಡು। ಹಾವನು ಸೊಂಟಕೆ ಸುತ್ತಿಕೊಂಡು। ಕಾಲಿಗೆ ಗೆಜ್ಜೆಯ ಕಟ್ಟಿಕೊಂಡು।।1।। ಎಲ್ಲಿ ಬಿದ್ದೆಯೊ ಮುರಿದಿದೆ ದಂತ। ಎಲ್ಲಿ ಹೋಯಿತು ವಾಹನ ಇಲಿಯು। ಹೋದರೆ ಹೋಗಲಿ ಟ್ರೈಸಿಕಲ್ ಕೊಡುವೆ। ಟ್ರಿನ್ ಟ್ರಿನ್ ಟ್ರಿನ್ ಟ್ರಿನ್ ಟ್ರಿನ್ ಬಾರಿಸು ಬೆಲ್ಲು।।2।।ಗೌರಿಯು ನಿನ್ನ ಬೈದಳೇನೊ। ಕಡುಬು ಹೂರಣ ಕೊಡಲಿಲ್ಲವೇನೋ। ಅಮ್ಮನು ಮಾಡಿದ ಹೋಳಿಗೆರಾಶಿ। ಎಲ್ಲವ ನಿನಗೆ ಕೊಡಿಸುವೆ ಬಾರೊ।।3।। ಥೈ ಥೈ ಥೈ ಥೈ ತಾಳವ ಹಾಕುತ। ಧೀಂ ಧೀಂ ಧೀಂ ಧೀಂ ನಗಾರಿ ಹೊಡೆಯುತ। ಭೋಂ ಭೋಂ ಭೋಂ ಭೋಂ ಮೆದಿಗೋ ಶಂಖ। ತಧಿನಾಂ ತಕತಕ ಕುಣಿಯೋಣ ಬಾರಾ।।4।। ಅಕ್ಕ ಬಂತು ಪಾಪು ಬಂತು ಪಕ್ಕದ ಮನೆಯ ಪುಟಾಣಿ ಬಂತು। ಏನೇನಾಟವ ಆಡೋಣ ನಾವು। ಹೋಗೋ ಹೋಗೋ ಆಟ ಬೇಡ। ಹೋಗೋ ಹೋಗೋ।।5।।

ಬಾರೋ2 ಗಣಪ ಸಣ್ಣ ಕಣ್ಣು — ರಾಗ: ಶಂಕರಾಭರಣ

ಬಾರೋ ಬಾರೋ ಗಣಪ। ಸಣ್ಣ ಕಣ್ಣು ಏಕಪ್ಪ। ಡೊಳ್ಳಹೊಟ್ಟೆ ಗಣಪ। ಇಲಿಯ ಮೇಲೆ ಕೂರಪ್ಪ। ಎದುರಿಗೆ ಬಂದ ನಾಗಪ್ಪ। ಹೆದರಿ ನಿಂತ ಇಲಿಯಪ್ಪ। ಜಾರಿ ಬಿದ್ದ ಗಣಪ। ನೋಡಿ ನಕ್ಕ ಚಂದ್ರಪ್ಪ। ನಮ್ಮನು ಕಾಯೋ ಗಣಪ।।

ವಾರಕ್ಕೆ ಏಳೇ ಏಳುದಿನ (ವಾರದ ನಮಸ್ಕಾರ) — ರಾಗ: ಕಲ್ಯಾಣಿ

ವಾರಕ್ಕೆ ಏಳೇ ಏಳು ದಿನ ಎಲ್ಲಾ ದಿನವೂ ಗಣಪಗೆ ನಮಸ್ಕಾರ।। ಮೊದಲನೇ ದಿನವೇ ಭಾನುವಾರ। ಬಾಲಗಣಪಗೆ ನಮಸ್ಕಾರ।। ಎರಡನೇ ದಿನವೇ ಸೋಮವಾರ। ಸಿದ್ಧಿ ಗಣಪನಿಗೆ ನಮಸ್ಕಾರ।। ಮೂರನೇ ದಿನವೇ ಮಂಗಳವಾರ। ಮಹಾಗಣಪತಿಗೆ ನಮಸ್ಕಾರ।। ನಾಲ್ಕನೆ ದಿನವೇ ಬುಧವಾರ। ಬಹುಳ ಗಣಪತಿಗೆ ನಮಸ್ಕಾರ।। ಐದನೇ ದಿನವೇ ಗುರುವಾರ। ಗಜಮುಖನಿಗೆ ನಮಸ್ಕಾರ।। ಆರನೇ ದಿನವೇ ಶುಕ್ರವಾರ। ಶುಕ್ಲಗಣಪತಿಗೆ ನಮಸ್ಕಾರ।। ಏಳನೇ ದಿನವೇ ಶನಿವಾರ। ಶಕ್ತಿಗಣಪತಿಗೆ ನಮಸ್ಕಾರ।।

ಶೃಂಗರಿಸಿದಳಾಗ ಪಾರ್ವತಿಯು — ರಾಗ: ಶ್ರೀ

ಶೃಂಗರಿಸಿದಳಾಗ ಪಾರ್ವತಿಯು ಗಣಪತಿಗೆ ಬೇಗಾ।।ಪ।। ಕತ್ತಿಗೆ ಮುತ್ತಿನ ಹಾರವನ್ನಿಟ್ಟು। ರತ್ನಕಿರೀಟವ ಮಸ್ತಕಕಿಟ್ಟು। ಹಣೆಗೆ ವಿಭೂತಿಯನ್ನಿಟ್ಟು। ಬಿಂದಿಗ್ಗಾತ್ರಾ ಗಂಧವನ್ನಿಟ್ಟು। ಒಂದು ಕೊಳಗದಕ್ಷತೆ ಹಣೆಗಿಟ್ಟು। ಪರಿಪರಿಯಲಿ ಮುದ ಗೊಳಿಸಿ।।1।। ಪಟ್ಟೆ ಪೀತಾಂಬರ ನಡುವಿಗೆ ಉಡಿಸೀ। ಮುತ್ತಿನ ಅಂಚಿನ ವಲ್ಲಿಯ ಹೊದ್ದಿಸಿ। ಗಟ್ಟಿಯಾಗಿರಲೊಂದು ಹಾವನು ಸುತ್ತಿ। ಚಿನ್ನದಂದಿಗೆ ಗೆಜ್ಜೆ ಕಾಲಿಗೆ ತೊಡಿಸಿ।।2।। ಚಿನ್ನದ ಕುಂಡಲ ಕರ್ಣಕೆ ಇಟ್ಟು। ಕೊರಳಿಗೆ ಪಚ್ಚೆಯ ಮಾಲೆಯ ಧರಿಸಿ। ಕರದಲ್ಲಿ ಕಡುಬು ಕಜ್ಜಾಯವನಿರಿಸಿ। ಬೆರಳಿಗೆ ಮುದ್ರೆ ಉಂಗುರ ಮೆರಸಿ।।3।।ಕರದಿ ತ್ರಿಶೂಲ

ಢಮರುಗ ಮೆರೆಸಿ। ಪರಿಪರಿಯಲಿ ಬೇಗ ಶೃಂಗರಿಸಿ। ಸಣ್ಣ ಮೂಷಕದ ಮೇಲೆ ಕೂರಿಸಿ। ನಿಮ್ಮ ತಾತನ ಮನೆಗ್ಹೋಣ ವೆಂದು ಮುದಪಡಿಸೀ॥4॥

ಸಂಪ್ರದಾಯ

ಆರೋಗಣೆ ಮಾಡೋ ಗಣಪತಿಯೇ — ರಾಗ: ಹಿಂದೋಳ

ಆರೋಗಣೆ ಮಾಡೋ ಗಣಪತಿಯೇ ಘನ ಹಾಲೋಗರ ಶಾಲ್ಯಾನ್ನ ಸೂಪವನೂ॥ಪ॥ ಚಿನ್ನದ ಬಟ್ಟಲು ರನ್ನದ ಬಾಳೆಲೆ ಚೆನ್ನಾಗಿ ಪನ್ನೀರ ಚುಮುಕಿಸುತಾ, ಚನ್ನಗಣನಾಥನಿಗೆನ್ನುತ ಮಾಡಿದೆ। ಪಾತ್ರಭಿಗಾರ ಮಾಡಿ ಪಾಯಸ ಬಡಿಸಿದೆ॥1॥ ಭಕ್ಷ ಮಂಡಿಗೆ ಫೇಣಿ ಶ್ಯಾವಿಗೆ ಪರಮಾನ್ನ, ಲಾಡು ಮಂಡಿಗೆ ಚಿರೋಟಿಗಳಾ, ಉಂಡಲಿಗೆ ಮೋದಕ। ತಂಡತಂಡದಿನಾನು। ಬೆರಸಿದೆಳ್ಳುಗಳನ್ನು, ಬೆನಕ ನಿನಗಿಟ್ಟಿದೆ॥2॥ ಪಡುವಲ ಕುಂಬಳ। ಗೋವರ್ಧನ ಬಾಳೆಕಾಯಿ ಪಲ್ಯವ ಹದಮಾಡಿಟ್ಟಿದೆ। ಹಪ್ಪಳ ಸಂಡಿಗೆ ಚಟ್ನಿ ಕೋಸಂಬರಿ। ತುಪ್ಪಾನ್ನ ದಧ್ಯಾನ್ನಗಳಾ॥3॥ ಕರಿದ ಹೂರಣ ಕಡುಬು, ಚಕ್ಕುಲಿ ಕಜ್ಜಾಯ ಕಾಯಿರಸವೂ ಕರಿದಾಂಬೋಡೆಗಳಾ। ಮುದ್ದು ಗಣಪ ನಿನಗೆ। ಉದ್ದಿನ ಕಡುಬುಗಳ। ಸಿದ್ಧವಾಗಿಟ್ಟಿದೆ ಎದ್ದು ಬಾರಯ್ಯಾ॥4॥ ಇಷ್ಟು ಭೋಜನವ ಮಾಡು, ಸಿಟ್ಟು ಮಾಡಲಿಬೇಡ। ಕೊಟ್ಟೇನು ಆಮೇಲೆ, ಕರಿಗಡುಬಾ। ಕೊನೆಗೆ ಧಧ್ಯಾನ್ನವ ಭುಂಜಿಸು ನಿನಗೆ ನಾ। ಕುಡಿಯಲು ಕೊಡುವೆನು। ಗೋವುಕ್ಷೀರಗಳಾ॥5॥

ಗಣಪತಿ ನಾ ನಿಮ್ಮ ನಾಮವ — ರಾಗ: ಮಧ್ಯಮಾವತಿ

ಗಣಪತಿ ನಾ ನಿಮ್ಮ ನಾಮವ ನೆನೆವೆ। ಮನಕೆ ಕೊಡಯ್ಯ ಮತಿ ಮಂಗಳವ॥ ಗೌರಿಯಸುತ ನಿಮ್ಮ ಗದ್ಯಾವ ನೆನೆವೆ। ಕಿವಿಕೊಟ್ಟು ಕೇಳಿ ಸುಜ್ಞಾನಿಗಳೆಲ್ಲ। ಬೇಡಿದ್ ಇಷ್ಟಾರ್ಥವ ಸಲಿಸುವಂತವನೆ। ಕಿರಿಗಿಡ್ಡ ಕಿರಿಗಿಡ್ಡ ಎಲ್ಲಾಡಿ ಬಂದ್ಯಲ್ಲೋ। ಅರೆಯ ಕೆಳಗೆ। ಅಡಕೆಯ ಕೆಳಗೆ ಗರಿಯಾ ಕಬ್ಬಿನ ಕಾನನದೊಳಗೆ। ಮರುಗ ಬೆಲ್ಲದ ಹೆಂಟೆಯ ಒಳಗೆ। ಹಾಲು ತುಪ್ಪಾದ ಬೆಣ್ಣೆಯ ಒಳಗೆ। ಮೊಸರು ತುಪ್ಪಾದ ಕೊಡದ ಒಳಗೆ। ಬಿದ್ದೇ ಕಣಯ್ಯ ಸೀಕರಣೆಯ ಗುಡ್ಡೆಯಲ್ಲಿ। ಇಂಥ ಮಣಿಯಾಗಿ ಒಬ್ಬಾನೆ ಬಂದು। ಲಡ್ಡಿಗೆ ಮೂರುಂಡೆ ಇಲ್ಲೆ ಬಾರೆಂಬೋರು। ಆ ಯೆಂದ್ಹಾಡಿತು ಹುರಿದಾ ಕಡಲೆ। ಬಾ ಯೆಂದ್ಹಾಡಿದು ನೆಲದಾ ಕಡಲೆ। ಕಂದಬಾರೆಂದಿತು ತೆಂಗಿನ ಕಾಯಿ। ಕೈಹಿಡಿದೆಬ್ಬಿಸಿತು ಬಾಳೆಯಹಣ್ಣು। ಮುತ್ತು ಮಾಣಿಕ್ಯವೆ ನೀ ಕಿರಿಗಿಡ್ಡ। ಮಕ್ಕಳ ಮಾಣಿಕ್ಯವೇ ನೀ ಕಿರಿಗಿಡ್ಡ। ಸಂಜೆಯ ಹೊತ್ತೆಲ್ಲ ನೀ ಕಿರಿಗಿಡ್ಡ। ಮದುವೆಯ ಮನೆಯಲ್ಲಿ ನೀ ಕಿರಿಗಿಡ್ಡ। ಮುಂಜಿಯ ಮನೆಯಲ್ಲಿ ನೀ ಕಿರಿಗಿಡ್ಡ। ಯಾವ ಯಾವ ಕಾರ್ಯಕ್ಕೂ ನೀ ಕಿರಿಗಿಡ್ಡ। ನಿತ್ಯದಲ್ಲಿ ಗೌರಿಯ ಪುತ್ರನಾಗಿರುವ। ಯಾವ ಕಷ್ಟ ಪಾತಕಗಳೆಲ್ಲ ಪರಿಹರಿಸುವ। ಶ್ರೀ ಗಜಮುಖನಿಗೆ ಶರಣು ಶರಣೆಂಬೆ॥

ಗಣಪತಿ ಪಾಲಿಸು ವರವಾ — ರಾಗ: ಅಠಾಣ

ಗಣಪತಿ ಪಾಲಿಸು ವರವಾ। ನಾ ಬೇಡುವೇ ಮುಗಿಯುತ ಕರವಾ। ಬೇಡಿದ ವರಗಳ ನೀವಾ, ನಮ್ಮ ಕರವ ಪಿಡಿಯುತೆ ಕಾಯ್ವಾ॥ಪ॥ ಆದಿ ಪೂಜೆಗೆ ಅಧಿಕಾರಿ ನಿಮ್ಮ। ಮೋದದಿ ಭಜಿಸುವೆ ಸಾರಿ। ಬರುತಲಿ ಮೂಷಿಕವೇರಿ ನೀ। ತೋರಿಸು ಎನಗೇ ದಾರೀ॥1॥ ಅರ್ಥವಿಲ್ಲದೆ ಇರುವಾ। ಅನಾಥರ ಕರುಣದಿ ಕಾಯ್ವಾ। ಭಕ್ತಿಲಿ ಪಿಡಿದರೆ ಪಾದವಾ। ಮುಕ್ತಿಯ ಕೊಡುವನು ದೇವಾ॥2॥

ಗಣಪತಿ ಬಾರೋ ಹಸೆಗೆ — ರಾಗ: ಪೂರ್ಣಚಂದ್ರಿಕೆ

ಗಣಪತಿ ಬಾರೋ ಹಸೆಗೆ, ಭಕ್ತರಾ ಮನೇಗೇ॥ಪ॥ ವರ ಭಾದ್ರಪದ ಶುದ್ಧ। ಚೌತಿಯ ದಿವಸದಿ ಭೂಮಿ ಪಾವನಗೈದೂ। ಭೂಲೋಕಕೇ ಬಂದೇ॥1॥ ನಿನ್ನನೆ ನಂಬಿದಾ। ಭಕ್ತರ ಮನೆಗೀಗಾ ಪರಮಾಕರುಣಾನಿಧಿ। ಗೃಹ ಪಾವನವ ಮಾಡು॥2॥ ಎಷ್ಟು ಬೇಡುವೆ ನಿನಗೆ। ಇಷ್ಟು ಕರುಣವು ಇಲ್ಲವು। ಕರಿಯ ಘಟ್ಟದ ವೆಂಕಟೇಶನ ದಯದಿಂದಾ॥3॥

ಪಾಲಿಸು ಕುಸುಮವನೂ **ರಾಗ: ಜನರಂಜನಿ**

ಪಾಲಿಸು ಕುಸುಮವನೂ ಗೌರೀದೇವಿ ಪುತ್ರ। ಬೇಡುತಿರುವ ಭಕ್ತಜನಕೆ।।ಪ।। ಘೋರ ಸಂಸಾರವೆಂಬ। ಸಾಗರದ ತೀರವನ್ನು। ತೋರಿಸಿ ಭಯವಹರಿಸಿ। ಪಾರುಗಾಣಿಸಯ್ಯ ಜನ್ಮ।।।1।। ಕಲ್ಹಾರ ಮೊಲ್ಲೆ ಮಲ್ಲಿಗೆ। ಒಳ್ಳೇ ಶಾವಂತಿಗೇಯ। ಕ್ಯಾದಿಗೇಯ ಕುಸುಮಗಳನು। ಬೇಡುತ್ತಿರುವ ಬಾಲೇಯರಿಗೆ।।2।। ಭಕ್ತಾರ ಮನದಲ್ಲಿರುವ ಕೋರಿಕೇಗಳನ್ನೇ ತಿಳಿದು। ಸಾರಸಾಕ್ಷ ಒಲಿದು ಪೊರೆಯೊ ಬೇಡುತ್ತಿರುವೆ ಶಿವಕುಮಾರ।।3।।

ಪಾಲಿಸು ಗಜವದನಾ ಪ್ರಸಾದವ **ರಾಗ: ಶ್ರೀ**

ಪಾಲಿಸು ಗಜವದನಾ ಪ್ರಸಾದವ।।ಪ।। ಬೇಡಿಕೊಂಬೆನು ನಿನ್ನ ಪಾಲಿಸು ನಿನ್ನಯಾ। ಪಾದದಲ್ಲಿರುವಂಥ। ಪರಿಮಳ ಪುಷ್ಪವಾ। ಪರಮದಯಾಕರ।।ಅ.ಪ.।। ಪಾರ್ವತಿ ವರಪುತ್ರಾ ಗಜಾನನ। ಪರಶಿವ ಪಾಲಿತ। ಪರಮ ದಯಾಕರ ಭವ ಭಯಹರನೇ ಮುಕ್ತಿಯಕೊಡುವಂಥ ಭಕ್ತಿಯ ಕುಸುಮವ।।1।। ವಂದಿಸದಿರೆ ಅನುಜ ವಿವಾಹಕೆ ತಂದೊಡಗಿಸಿದೆ ವಿಘ್ನ। ವಂದಿಸೆ ಅನುಜನು ಚೆಂದದಿಂದಲೆ।। ವಿವಾಹವ ನಡೆಸಿದ ಸೊಂಡಿಲ ಗಣಪನೆ।।2।।

ಪಾಲಿಸೈ ಗಣೇಶನೆ ಎನ್ನ **ರಾಗ: ಶುಭಪಂತುವರಾಳಿ**

ಪಾಲಿಸೈ ಗಣೇಶನೆ ಎನ್ನ। ನೀಲಕಂಠಪುತ್ರನೇ।।ಪ।। ಸೋಮಸುಂದರ ಕೋಮಲಾಂಗನೇ। ಧೂಮಕೇಶವನಾಮ ಸುಮುಖನೇ। ಕಾಮವೈರಿಯಾ ಪ್ರೇಮಸುತನಿನ್ನ। ನಾಮವನನುದಿನ ನೇಮದೀಭಜಿಪೆನು।।1।। ವಂದಿಸುವೆನಿನ್ನ। ಸುಂದರಾಂಗನೇ ಬಂದು ನೀ ಬೇಗ ಬಂಧಬಿಡಿಸೀಗ। ಇಂದುದರನಾ ಕಂದನೇ ನೀನು। ಚೆಂದಾದಿಬಂದೀಗ ಇಂದೆನ್ನರಕ್ಷಿಸು।।2।। ಲಂಬಉದರನೇ। ಶಂಭುಪುತ್ರನೇ ಸಂಭ್ರಮದ ಹೇರಂಭ ದೇವನೇ। ಶುಂಭಿಮರ್ದನಾಯಾಂಬ ದೇವಿಯ ಸಂಭ್ರಮಪುತ್ರನೇ। ನಂಬೀದೆನಿನ್ನನು।।3।।

ಬಾರೋ ಗಿರಿಜಾ ಪುತ್ರಾ **ರಾಗ: ಗೌಳಿಪಂತು**

ಬಾರೋ ಗಿರಿಜಾ ಪುತ್ರಾ। ಬಾರೋ ವರ ಮಂಟಪಕ್ಕೆ।।ಪ।। ತೋರೋ ಸಕಲ ಜನಕೆ ಸಂತೋಷಾ। ಮಾರ ವೈರಿ ಸುತ ಗಣನಾಥಾ।।ಅ.ಪ।। ಮಂಗಳ ಮಹಿಮಾ। ಪಾರ್ವತಿ ಪುತ್ರ। ವಿಘ್ನರಾಜನೇ। ಗಜವದನಾ। ಬೇಡುವೆ ನಿನ್ನನು ಮನ್ನಿಸಿ ಎಮ್ಮಯ ಸದನಕೆ ಪ್ರೀತಿಯಿಂ ಬಾರೆಲೋ।।1।। ಭಕ್ತರ ಮನದಾ ಕೋರಿಕೆ ಸಲ್ಲಿಸಿ। ವರಗಳ ನೀಡುತ ಬಾರೆಲೋ। ಭಕ್ತಿಯಿಂ ವಂದಿಪೆ ಕರಗಳ ಮುಗಿಯುವೆ। ಆನಂದ ಮೂರ್ತಿಯೆ ಗಣಪತಿಯೇ।।2।।

ಮುಕ್ಕಣ್ಣ ಶಿವನ ಮೋಹದ ಮುದ್ದುಕಂದ **ರಾಗ: ಆನಂದಭೈರವಿ**

ಮುಕ್ಕಣ್ಣ ಶಿವನ ಮೋಹದ ಮುದ್ದುಕಂದ। ಅರ್ಥಿಯಲಿ ಬರುವುದು ಕಂಗಳಿಗೆ ಚೆಂದ। ಬೆಟ್ಟಲಿ ಪಿಡಿದ ಪಾಶಾಂಕುಶದಂದ। ಚಿಕ್ಕ ಇಲಿಯನು ಏರಿ ಬರುವೋ ಆನಂದ। ದಿಟ್ಟ ಗಣೇಶ ಹಸೆಗೇಳು ।।1।। ಕಿಡಿಗಣ್ಣ ಶಿವನ ಮೋಹದ ಮುದ್ದುಕಂದ। ಬೆಡಗೀಲಿ ಬರುವುದು ಕಂಗಳಿಗೆ ಚಂದ। ಕೈಯಲಿ ಪಿಡಿದ ಪಾಶಾಂಕುಶದಂದ। ಮರಿ ಇಲಿಯ ಏರಿ ಬರುವೊದಾನಂದ। ಭರದಿ ಗಣೇಶ ಹಸೆಗೇಳು।।2।। ಚಕ್ಕುಲಿ ತರಗು ಲಡ್ಡಿಗೆಯನ್ನೆ ಸವಿದು। ಬಚ್ಚಿಟ್ಟ ಹಣ್ಣನೆಲ್ಲ ಮಾಯವಮಾಡಿ। ಮತ್ತದ ತೆಗೆವೆನೆಂದರೆ ಮಾಯಮಾಡಿ। ಕೊಟ್ಟೇನು ಮಗನಿಗೆಂದರೆ ದಯಮಾಡಿ। ದಿಟ್ಟ ಗಣೇಶ ಹಸೆಗೇಳು।।3।।

ವರ್ಣಿಸಲೆನ್ನಿಂದ ತರವೇ ಗೌರಿ ನಿನ್ನ **ರಾಗ:ಮಾಧ್ಯಮಾವತಿ**

ವರ್ಣಿಸಲೆನ್ನಿಂದ ತರವೇ। ಗೌರಿ ನಿನ್ನ ಪುತ್ರನ ರೂಪುಗಳಾ।।ಪ।। ಮೊರದಗಲಾ ಕಿವಿಗಳಿಂದ। ಹಾರಾಡಿಸುತಾ ಬರುವುದೇ ಚೆಂದಾ। ಮಾರುದ್ದಾ ಸೊಂಡಿಲಿನಿಂದಾ। ಕರಿಗಡಬೂಗಳನೆ ತಿಂದಾ। ಭಕ್ತರಾ ಮನೆಗಳಿಗೇ। ಬರುವುದೇ ಬಲು

ಚೆಂದಾ॥1॥ ನಾಲ್ಕು ಹಸ್ತಗಳಿಂದಾ। ತ್ರಿಶೂಲಖಡ್ಗವೇ ಚಂದಾ। ವಿಭೂತೀ ನೋಡಾನಂದಾ। ಕರಿಗಡಬಿನ ಕೈಯಿಂದಾ। ಚಂದದಾ ನಡೆಯಿಂದಾ। ಬಂದರೇ ಆನಂದಾ॥2॥ ಉಟ್ಟ ಪಿತಾಂಬರವೇ ಚಂದಾ। ಡೊಳ್ಳೊಟ್ಟೆ ಮೇಲೆ ಗಂಧಾ। ಸರ್ಪನ ಬಿಗಿದಿಹ ಚೆಂದಾ। ಕಾಲಂದಿಗೆ ಗೆಜ್ಜೆಗಳಿಂದಾ। ನಾದಗಳಾ ಮಾಡುತಲೀ। ಬರುವುದೇ ಬಲು ಚಂದಾ॥3॥ ಇಷ್ಟಾದರೆನಗೆ ಸಾಲದೂ। ಇನ್ನೊಂದು ಪದಾರ್ಥವು ಬೇಕೂ। ರುದ್ರಾಕ್ಷೀ ಕೊರಳಿಗೆ ಬೇಕೂ। ಮೂಷಿಕವನೇರಲಿ ಬೇಕೂ। ಬರುತಾಲೀ ಇರಬೇಕು। ಚಂದ್ರನು ನಗಬೇಕೂ॥4॥

ವರಗಳ ನೀಡಯ್ಯ ಒಲಿದು — ರಾಗ: ಜಂಜೋಟಿ

ವರಗಳ ನೀಡಯ್ಯ ಒಲಿದು ದಯಮಾಡಯ್ಯ॥ ಸದಾನದೊಳಾಡಯ್ಯ॥ ಮುದದಿ ಕಾಪಡಯ್ಯ॥ಪ॥ ಚಂದ್ರಶೇಖರರಾಯ। ಗಂಧಾಮಂತ್ರಾಕ್ಷತೆ॥ ಮಂಧಾರಮಲ್ಲಿಗೆ ತಂದು ಪೂಜಿಸುವೆನು॥ ಹಳದೀ ಮಂತ್ರಾಕ್ಷತೆತಳಿಗೇಲಿತಂದೀಪೆ। ವರಮುದ್ದು ಗಣಪ॥1॥ ಒಲಿದು ಎನಗೆ ಬೇಗ। ಮತಿವಂತನೇ ನಿನ್ನ ಹಿತದೀ ಪೂಜಿಸುವೆನು। ಪತಿಭಾಗ್ಯ ಸ್ಥಿರವೆಂದು ಅತೀ ಹಿತದಿಂದೆನಗೆ॥2॥

ಶಿವಕುಮಾರನೇ ಭವವಿದೂರನೇ — ರಾಗ: ಮಧ್ಯಮಾವತಿ

ಶಿವಕುಮಾರನೇ ಭವವಿದೂರನೇ। ದಯಮಾಡೈ ಹಸೆಗೀಗ॥ಪ॥ ಗಣಪತೀ ನೀ ಈಶ್ವರಕರುಣಾಕರ ಜಗದೀಶ್ವರ ಕರುಣಾಕರ ಪಾಶಾಂಕುಶಧರ। ಪಾರ್ವತಿ ಕುಮಾರ। ಕೇಸರೀ ಪೀಠಕೆ ಹರುಷದಿನೀ ಶಕ್ತಿ ಗಣಪತಿ ಬಾರೆಲೊ॥1॥ ಗಂಗವರ ಸುತ ಬಾರೆಲೋ। ಮಂಗಳಾಂಗನೇ ನಿನ್ನ। ಮಂಗಳಾಂಗಿಯರೆಲ್ಲಾ ಬಂಗಾರದ್ಹಸೆಗೀಗ ಕರೆಯುವರೈ॥2॥ ಮೃತ್ಯುಂಜಯನ ಸುತ ಮಿತ್ರೆರೆಲ್ಲ ನಿನ್ನ ಮುತ್ತಿನ ಹಸೆಗೀಗ ಕರೆಯುವರೈ॥3॥

ಸಿದ್ಧಿವಿನಾಯಕ ಎದ್ದು ಬಂದರೆ — ರಾಗ: ಷಣ್ಮುಖಪ್ರಿಯ

ಸಿದ್ಧಿವಿನಾಯಕ ಎದ್ದು ಬಂದರೆ ನಿನಗೊಬ್ಬಟ್ಟು ಕೊಡುವೆನು ಬಾ ಸಜ್ಜಿಗೆ ತುಪ್ಪವು ಶ್ಯಾವಿಗೆ ಪರಮಾನ್ನ ಬೇಗದಿ ಕೊಡುವೆನು ಬಾ॥ಪ॥ ಬಾ ಬಾರೋ ಗೌರಿತನಯನೇ। ಮುದ್ದು ಸಿದ್ಧಿವಿನಾಯಕ। ಬಾ ಗಜಮುಖ ಗಜಮುಖ ಬಾರೆಂದೂ ಹಸೆಗೆ ಕರೆದರು॥1॥ ಮೂಷಕವಾಹನ ಮೋದಕ ಪ್ರಿಯನೇ। ಮುರಹರ ನಾಭನೇ ಬಾ। ದುರಿತಗಳನು ಪರಿಹರಿಸುತಲೀ ದುಂಡಿವಿನಾಯಕ ಬಾ। ಗಜಮುಖ ಬಾ॥2॥ ನೆರೆ ವಿಘ್ನದಾಯಕ। ನೆನೆಗಡಲೆಯನ್ನೆಲ್ಲಾ ಬೆರೆಸಿ ಕೊಡುವೆ ಮೆಲ್ಲು ಬಾ। ಒಡೆದ ತೆಂಗಿನ ಕಾಯಿ। ಸುಲಿದ ಬಾಳೆಹಣ್ಣು। ಎಲ್ಲವ ಕೊಡುವೆ ಮೆಲ್ಲು ಬಾ ಗಣಪಾ। ಬಾರೋ ಗೌರಿತನಯನೇ ಮುದ್ದು ಸಿದ್ಧಿವಿನಾಯಕ ಬಾ। ಗಜಮುಖ॥3॥ ಕಾರೆ ವಿನಾಯಕ ಓಡಿ ಬಂದರೆ ನಿನಗೆ ಕಾರೆಳ್ಳು ಕೊಡುವೆನು। ಹೂರಿಗೆ ತುಪ್ಪವು ಪರಡಿ ಪರಮಾನ್ನವ ಬೇಗದಿ ಕೊಡುವೆನು ಬಾ॥ ಅಪ್ಪವು ಅತಿರಸ ತುಪ್ಪ ಬಾಳೇಹಣ್ಣು ಒಪ್ಪದಿ ಕೊಡುವೆನು ಬಾ। ಸಕ್ಕರೆ ಘೃತ ಸಕಲ ಪಕ್ವಾನ್ನವ ಇಕ್ಕುವ ನೀ ಮೆಲ್ಲು ಬಾ॥4॥

ಸೊಂಡಿಲ ಗಣನಾಥ — ರಾಗ: ಆನಂದಭೈರವಿ

ಸೊಂಡಿಲ ಗಣನಾಥ ಉಂಡಲಿಗೆಯ ನೀವೆ ರುಚಿಯಾಗಿರುವಂಥಾ॥ಪ॥ ಖಂಡಸಕ್ಕರೆ ಕಬ್ಬು ಕಡಲೆ ತಂಬಿಟ್ಟನು ಸಂಭ್ರಮದಿಂದಲಿ ತಂದು ಕೊಡುವೆನಯ್ಯ। ಆಡು ಬಾ ನಮ್ಮ ಅರಮನೆಯೊಳಗೆಲ್ಲಾ ನೋಡುವೆ ಮನ ದಣಿಯಾ॥1॥ ಆನೆ ಮುಖದೋನೇ ಅಂಬಿಕಾ ಪುತ್ರನೆ ನಂಬಿದ ವರವಕೊಡು ಕಂಬುವಿನಾಯಕ। ಕರೆವೆನು ನಾ ನಿಮ್ಮ ಸಂಭ್ರಮದಿಂದಲಿ ಓಡಿಬಾ ನಮ್ಮ ಮನೆಯೊಳಗೆ॥2॥ ಹೊಟ್ಟೆಗೆ ಬಿಗಿದಂಥಾ ಸರ್ಪವ ಸಡಿಲಿಸಿ ಮೃಷ್ಟಾನ್ನವನುಂಡು ತುಪ್ಪ ಹಾಲನು ಕುಡಿದು। ಚಕ್ಕುಲಿ ಭಕ್ಷ್ಯವಾ ಒಪ್ಪದಿಂದಲಿ ತಂದೆ ಹರಸು ಎಮ್ಮನು ಶ್ರೀ ಗಣನಾಥನೆ॥3॥ ಮೂರು ದಿನವಿದ್ದ ಮುದ್ದು ಗಣೇಶ ಮಂಗಳಾರತಿಯನೆಗೊಂಡು ಭಾಗೀರಥಿಯೊಡಗೂಡಿ। ಬಹಳ ಹರುಷದಿಂದ ಹೋಗುವೆ ಬಾರಯ್ಯ ವರದ ಗಣೇಶ ನೀ ಬೇಡಿದ್ದನೆಲ್ಲ ಕೊಡುವೆ॥4॥

ಇತರೆ

ಗಜಮುಖನೆ ತ್ರಿಜಗವಂದಿತನೆ (ಜಾನಪದ) ರಾಗ: ಹಂಸಧ್ವನಿ

ಗಜಮುಖನೆ ತ್ರಿಜಗವಂದಿತನೆ ಸರ್ವೇಶಾ। ಭುಜಗಭೂಷಣ ನಮ್ಮ ಸಲಹೋ ವಿಘ್ನೇಶಾ॥ಪ॥ ಶಶಿಕಿರಣ ಮಣಿಭರಣ ಕಾಂತಿಯಾ ಗಜವದನಾ। ವರದ ಮೋದಕದ ಬಿದಿಗೆಯಾ ಚಂದ್ರಧರನಾ। ವರದ ಪಾಶಾಂಕುಶದ ಸಿದ್ಧಿದಾಯಕನಾ। ಹರುಷದಿಂ ಬಲಗೊಂಬೆ ಶ್ರೀಗಣಾಧಿಪನ ॥1॥ ಕಕ್ಕೆ ಕಣಗಲು ವಿಷ್ಣುಕ್ರಾಂತಿ ಮರುಗವನು। ಯಕ್ಕೆ ಹಣ್ಣೆಲೆ ಹಲಸು ನಿಂಬೆ ಗರುಕೆ ಯನೂ। ಲಕ್ಕೆ ಉತ್ತರಣೆ ಮಾವಿನ ತಳಿರುಗಳನು। ಚಿಕ್ಕ ನೇರಿಲು ಪತ್ರೆ ಬಿಲ್ವಪತ್ರೆಯನು॥2॥ ಕಡಲೆ ನೆನಗಡಲೆ ಹುರಿಗಡಲೆ ಬೆಲ್ಲಗಳಾ। ಹಿಡಿದೆಳ್ಳು ಚಿಗಳಿ ತಂಬಿಟ್ಟಿನುಂಡೆಗಳಾ। ಮಂಡಿಗೆ ಗಾರಿಗೆಯಾ ಸಕ್ಕರೆಯಾ ಬುರುಗುಗಳಾ। ಒಡೆಯ ಗಣಪತಿಗೆ ಕಡುಬಿನಾ ರಾಶಿಗಳಾ॥3॥ ಜಯಜಯತು ಸಕಲ ವಿದ್ಯೆಗೆ ನೀನೇ ದೇವಾ। ಜಯಜಯತು ಮುಕ್ಕಣ್ಣನ ಸುತನೆನಿಸಿ ಮೆರೆವಾ। ಜಯಜಯತು ಭಕ್ತರಾ ಭವಗಳನು ಕಾಯ್ವ। ಜಯಜಯತು ಬಾಲರಿಗೆ ಬೆನಕ ಸಂಜೀವಾ॥4॥

“ಲಾವಣಿ”

ಅಕ್ಕರೆಯಿಂದಲಿ ಸುಜನರು ಕೇಳಿರಿ ರಾಗ: ತಿಲಂಗ್

ಅಕ್ಕರೆಯಿಂದಲಿ ಸುಜನರು ಕೇಳಿರಿ। ವರ ವಿಘ್ನೇಶ್ವರ ಚರಿತೆಯನು॥ ವಿದ್ಯಾಬುದ್ಧಿಯನಿಕ್ಕುತ ಸುರತರ। ಸಿದ್ಧಿವಿನಾಯಕ ಮಹಿಮೆಯನು॥1॥ ಹಿಮಗಿರಿ ಶೃಂಗದಿ ವರ ಕೈಲಾಸದಿ। ಗಿರಿಜಾಶಂಕರರೊಲವಿನಲಿ॥ ಪ್ರಮಥರ ಗಡಣಕೆ ನಂದಿಯು ಸಹಿತ। ಇರುತಿರೆ ಅತ್ಯಾನಂದದಲಿ॥2॥ ಪರಶಿವ ಮನೆಯೊಳಗಿಲ್ಲದ ಸಮಯದಿ। ಗೌರಿಯು ಮಾಯಾ ಶಕ್ತಿಯಲಿ॥ ಸೃಷ್ಟಿಸೆ ಮಾನಸ ಪುತ್ರನ ನುಡಿದಳು। ಈ ಪರಿಯಿಂದಲಿ ಮಮತೆಯಲಿ॥3॥ ಕಂದಾ ಬಿಡದಿರು ಒಳಗಡೆಯಾರನು। ಕುಳಿತಿರು ನೀನು ಬಾಗಿಲಲಿ॥ ಸ್ನಾನವ ಮುಗಿಸುತ ನಾನೇ ಬರುವೆನು। ಎನ್ನುತ ನಡೆದಳು ಮೋದದಲಿ॥4॥ ಅರಿಯದ ಕಂದನು ಕಾಯುತ ಕುಳಿತಿರೆ। ಕಳೆಯಿತು ಕೆಲವೇ ನಿಮಿಷಗಳು। ಹೊರಗಡೆಯಿಂದಲಿ ಬಂದನು ಶಂಕರ। ಒಳಗಡೆ ಶಿಶುತಾ ಬಿಡದಿರಲು॥5॥ ಗೃಹವಿದು ನನ್ನದು ನಾನೇ ಒಡೆಯನು। ಎನ್ನನು ತಡೆವುದು ತರವಲ್ಲ॥ ಮುದ್ದಿನ ಮಗು ನೀನೇತಕೆ ತಡೆಯುವೆ। ಎಂದರು ಒಳಗಡೆ ಬಿಡಲಿಲ್ಲ॥6॥ ಮಾತೆಯ ಮಾತನು ಮೀರೆನು ಎನ್ನುತ। ಕಂದನು ಛಲದಿಂ ಮರುನುಡಿಯೇ॥ ಕೋಪಾವೇಶದಿ ಶಿವ ಮೈಮರೆಯುತ। ಶೂಲದಿ ಶಿರವಂ ತಾನಿರಿಯೆ॥7॥ ಚಿಟ್ಟನೆ ಚೀರಿತು ರುಂಡವು ಹಾರಿತು। ಗೌರಿಯು ಬಂದಳು ಕಾತರಿಸಿ॥ ಕಂದನ ನೋಡುತ ಅಯ್ಯೋ ಎನ್ನುತ। ಅಳುತಿರೆ ದುಃಖವು ಉಮ್ಮಳಿಸಿ॥8॥ ಒಡನೆಯೆ ಪುರಹರ ಮಮ್ಮಲ ಮರುಗಿದ। ತನ್ನಯ ತಪ್ಪನು ತಾ ತಿಳಿದು॥ ಅಳದಿರು ನಿನ್ನ ಕಂದನ ಬದುಕಿಪೆ। ಎಂದನು ಗಿರಿಜೆಯ ಬಳಿ ಕರೆದು॥9॥ ಉತ್ತರ ದಿಕ್ಕಿಗೆ ಶಿರವಾ ಚಾಚಿದ। ಮಲಗಿದ ಜೀವಿಯ ರುಂಡವನು॥ ಒಡನೆಯೆ ತನ್ನಿರಿ ಗಣಗಳೆ ಪೋಗಿರಿ। ಎನ್ನುತ ಅಪ್ಪಣೆ ಮಾಡಿದನು॥10॥ ಮದಗಜವೊಂದರ ರುಂಡವ ಛೇದಿಸಿ। ತಂದರು ಗಣಗಳು ರಭಸದಲಿ॥ ರುಂಡವ ಮುಂಡಕೆ ಶಿವ ತಾ ಜೋಡಿಸಿ। ನೀಡಿದ ಜೀವನ ಕರುಣದಲಿ॥11॥ ಪ್ರಮಥರ ಗಡಣಕೆ ಅಧಿಪತಿಮಾಡಲು। ಗಣಪತಿ ಎನ್ನಲು ಪಶುಪತಿಯು॥ ಸುಂದರ ಮದಗಜ ಮುಖವನೆ ನೋಡುತ। ಗಣಪತಿ ಎಂದಳು ಪಾರ್ವತಿಯು॥12॥

ಕೈಲಾಸೇಶನ ಪ್ರೀತಿಯ ತನುಜ

ಕೈಲಾಸೇಶನ ಪ್ರೀತಿಯ ತನುಜ ಗಣೇಶ ದೇವನ ಪೂಜಿಸಿರಿ। ಗಜಮುಖ ದೇವ ಗಣಪತಿಯನ್ನು ಅಂದದಿ ಎಲ್ಲರು ಶೃಂಗರಿಸಿ॥1॥ ಗಣೇಶ ದೇವನ ದರುಶನ ಒಂದೇ ಮನದಲಿ ಶಾಂತಿಯ ತುಂಬಿಹುದು। ವಿಘ್ನನಿವಾರಣ ವಿದ್ಯಾಭರಣ ಜಗವನು ಕಾಯುವ ಪ್ರೀತಿಯಲಿ॥2॥ ಗೌರಿಶಿವನ ಸುತ್ತಲು ನಡೆದು ಜಗವೇ ಅದರೊಳು ಇದೆ ಎಂದ। ಗಣೇಶದೇವನ ಮನದೊಳು ನೆನೆದರೆ ವಿಜಯವು ಖಂಡಿತ ಓ ಜನರೇ॥3॥

ಗಣಪತಿ ಬಂದವ್ನೆ ಕಡುಬನ್ನು

ಗಣಪತಿ ಬಂದವ್ನೆ ಕಡುಬನ್ನು ತಿಂತವ್ನೆ। ಬಾಲಕರೆಲ್ಲರು ಶರಣೆನ್ನಿ। ಬಾಲಕರೆಲ್ಲರು ಶರಣೆನ್ನಿ ದೇವಾಗೆ। ಕಡುಬನ್ನು ತಿಂತಿರುವ ದೇವಾಗೆ॥ ವಿದ್ಯೆಯ ಕೊಡ್ತಾನೆ ಬುದ್ಧಿಯ ಕೊಡ್ತಾನೆ। ಕೆಲಸಕ್ಕೆ ಜಯವನ್ನು ಕೊಡ್ತಾನೆ। ಕೆಲಸಕ್ಕೆ ಜಯವನ್ನು ಕೊಡ್ತಾನೆ ಗಣಪಣ್ಣ। ಜೈ ಜೈ ಜೈ ಬೆನಕಣ್ಣ॥ ಗೌರಿ ಶಿವನ ಸುತ್ತಲು ನಡೆಯುತ್ತ। ಜಗವನ್ನೆ ಸುತ್ತೀದೆ ಎಂದ್ಬಿಟ್ಟ। ಜಗವನ್ನೇ ಸುತ್ತಿದೆ ಎಂದ್ಬಿಟ್ಟ ಗಣಪಣ್ಣ। ಸಂತಸ ಅವರಿಗೆ ತಂದ್ಬಿಟ್ಟ॥ ತನ್ನೀರಿ ಎಲ್ಲರೂ ಬಗೆಬಗೆ ಹೂವನ್ನು ತನ್ನೀರಿ ಗರಿಕೆಯ ಹುಲ್ಲನ್ನು। ತನ್ನೀರಿ ಗರಿಕೆಯ ಹುಲ್ಲನ್ನು ಕಬ್ಬನ್ನು। ಗಣಪತಿ ಕಾಯ್ತಾನು ನಮ್ಮನ್ನು॥ ತನ್ನನ್ನು ನೋಡುತ ಹಾಸ್ಯವ ಮಾಡೀದ ಚಂದ್ರಗೆ ತೋರಿದ ಬಲುಕೋಪ। ಚಂದ್ರಗೆ ತೋರಿದ ಬಲುಕೋಪ ಗಣಪಣ್ಣ। ಇತ್ತನು ಅವನಿಗೆ ಕಡುಶಾಪ॥ ಗಣಪಣ್ಣ ಬರೆದವ್ನೆ ವ್ಯಾಸ ಭಾರತ। ಸರಸರನೆ ಬರೆಯುತ್ತಾ ಚೆಂದಾಗಿ। ಸರಸರನೆ ಬರೆಯುತ್ತಾ ಚೆಂದಾಗಿ ಗಣಪಣ್ಣ ಕೊಟ್ಟವ್ನೆ ಭಾರತವ ನಮಗಾಗಿ॥

ಆರತಿ

ಆರತಿ ಎತ್ತಿರೆ ಸಾರಸಮುಖಿಯರು — ರಾಗ: ಶಂಕರಾಭರಣ

ಆರತಿ ಎತ್ತಿರೆ ಸಾರಸಮುಖಿಯರು ಧೀರ ಗಣೇಶನಿಗೆ। ಚಾರು ಗಜಾನನ ಭೂರಿ ದುರಿತವರ ಗೌರಿ ಕುಮಾರನಿಗೆ॥ಪ॥ ಹಳದಿಯ ಮನೆಯಲಿ ಹರಿವಾಣದ ಹೊಸ ಹವಳದ ಆರುತಿಯ। ಹರುಷಗಳಿಂದಾ ವಿನಯದಿ ತಂದು ಮೆರೆವ ಗಣಾಧಿಪಗೆ॥1॥ ಅರಳಿದ ಮಲ್ಲಿಗೆ ಪರಿಮಳ ಕೇದಿಗೆ ಹರುಷದಿ ಮುಡಿದವಗೆ। ಆನಂದದಿಂದ ಹರಸುತಲಿರುವ ಬಾಲ ಗಣಾಧಿಪಗೆ॥2॥ ಮೂಷಿಕವಾಹನ ಮೂಜಗದೊಡೆಯಗೆ ಪಾಶಾಂಕುಶಧರಗೇ। ಮೀಸಲು ಮಾಡಿದ ಸೂಸಲು ಕಡುಬನು ಮೆಲುವ ಗಣಾಧಿಪತಿಗೆ॥3॥

ಆರುತಿ ಬೆಳಗುವೆ ಶ್ರೀ ಗಣನಾಥಗೆ — ರಾಗ: ಹಂಸಧ್ವನಿ

ಆರುತಿ ಬೆಳಗುವೆ ಶ್ರೀಗಣನಾಥಗೆ। ಶ್ರೀಕಂಠೇಶ್ವರಗೆ। ಪಾರ್ವತಾದೇವಿಗೆ। ಪರಶಿವಮೂರ್ತಿಯ ಪಾದಕಮಲಗಳಿಗೆ। ಮಂಗಳಾರುತಿ ಬೆಳಗಿರೆ॥ಪ॥ ವಂದಿಸಿದವರಿಗೆ ವರವಕೊಡುವ। ನಂದಿನೀಗಿರಿಸುತೆಗೆ। ಅಂಬಿಕಾ ಕಾತ್ಯಯಿನಿಯರಿಗೆ। ನಂಜುಡೇಶ್ವರಗೆ। ಹೂವಿನಾರುತಿ ಬೆಳಗುವೆ। ಮುತ್ತಿನಾರುತಿ॥1॥ ಷಡುವದನನ ಮಾತೆಗೆ ಶಂಕರಿಗೆ। ಗಿರಿಜಾರಮಣನಿಗೆ। ಕದಲಾರುತಿಗಳ ಎತ್ತುವೆ ಹರುಷದಿ। ಕಮಲಾಕ್ಷನಸಖನ। ಸುತನಿಗೆ॥2॥

ಕುಂಕುಮದಾರುತಿ ಶಂಕರ ಸುತನಿಗೆ — ರಾಗ: ಶ್ರೀ

ಕುಂಕುಮದಾರುತಿ ಶಂಕರ ಸುತನಿಗೆ ಗಣಪತಿಗೀಗಲೆ ಎತ್ತುವೆವು॥ಪ॥ ಮೂಷಕವಾಹನ ಮೋದಕಹಸ್ತಗೆ ಪಾಶಾಂಕುಶಧರ ದೇವನಿಗೆ। ಆದರದಿಂದಲಿ ಭಕ್ತರ ಪೊರೆವಾ ಬಿರುದನು ಧರಿಸಿಹ ದೇವನಿಗೆ॥1॥ ಸೊಂಡಿಲ ಗಣಪಗೆ ವಂದಿಸಿ ನಲಿಯುತ ಉಂಡಲಿಗೆಗಳನೀಡುತಾ। ಭಕ್ತರ ಮನದಾ ಕೋರಿಕೆ ಸಲ್ಲಿಸಿ ಪಾಲಿಸು ಎಂದೂ ಬೇಡುತ್ತಾ॥2॥

ಗಣಪತಿಗೊಲಿದಾರತಿ ಎತ್ತಿರೆ — ರಾಗ: ಬೇಹಾಗ್, ಆದಿತಾಳ

ಗಣಪತಿಗೊಲಿದಾರತಿ ಎತ್ತಿರೆ ಫಣಿವರ ಭೂಷಣ ತ್ರಿನಯನ ಸುತಗೇ ॥ ಲೋಕಾವಳಿ ಪಾಲಕ। ಶೋಕಾವಳಿ ನಾಶಕ। ಶ್ರೀಕರ ಸುಗುಣಾಕರ। ಏಕ ದಂತನಿಗೆ॥1॥ ಗಜರಾಜ ಮುಖ ಸದಾ। ಸಜನಾವನ ಕೋವಿದ। ಅಜಮುಖ ಅಮರ ವಂದಿತ। ವಿನುತ ಭಜಕಜನಾಮರ। ಕುಜ ನೆನಿಸಿದ ॥2॥ ಸುರಮೌನಿ ಸುಪೂಜಿತ। ಕರುಣಾಸಪೂರಿತ। ದುರಿತದೂರ ನತಾದರ। ಸುಕರ ಪರಮ ಚರಿತ ಕವಿ। ನರಹರಿಸುತ ॥3॥

ಗಿರಿಜೆ ಸುತಾ ಗಣಪತಿಗೇ — ರಾಗ: ಧೇನುಕ

ಗಿರಿಜೆ ಸುತಾ ಗಣಪತಿಗೇ ನವರತ್ನದಾರತೀ॥ಪ॥ ಪಾಡಿರೇ ನೋಡಿ ಬೇಡಿರೇ॥ ವರವ ಬೇಡಿರೇ, ಕರವ ನೀಡಿರೇ, ಕರಿಮುಖಿಗೇ ಗಣಪತಿಗೇ॥1॥ ಮೂಷಿಕವೇರಿದವನಿಗೇ ವಿಘ್ನರಾಜನಿಗೇ, ಸಿದ್ಧಿ ಪ್ರೀಯಗೇ॥ ವರಸಿದ್ಧಿ ಗಣಪತೀಗೇ॥2॥ ಚಂದ್ರಗೆ ಶಾಪವನಿತ್ತವಗೇ। ಶಾಂತಮೂರ್ತಿಗೇ, ನಿಜಮುಕ್ತಿ ಕೊಡುವಗೇ॥3॥ ಕರುಣದಿ ಕಾಯಲೆಮ್ಮನೂ ಕರಿಯ ಘಟ್ಟದಾ ವೆಂಕಟಾರಮಣನಾ ದಯದೀ॥4॥

ಜಯ ಗಣೇಶ3 ದೇವಾ **ರಾಗ: ಮಾಂಡ್**

ಜಯ ಗಣೇಶ ಜಯ ಗಣೇಶ ಜಯ ಗಣೇಶ ದೇವಾ॥ಪ॥ ಮಾತಾ ಜಾಕೀ ಪಾರ್ವತೀ ಪಿತಾ ಮಹಾದೇವಾ॥ ಲಡ್ಡು ಅನ ಕಾ ಭೋಗ ಲಾಗೆ, ಸಂತ ಕರೇಂ ಸೇವಾ॥1॥ ಏಕದಂತ ದಯಾವಂತ ಚಾರ್ ಭುಜಾ ಧಾರೀ। ಮಸ್ತಕ ಸಿಂಧುರ ಸೋಹೆ, ಮೂಸೆ ಕೀ ಸವಾರೀ॥2॥ ಅಂಧನ್ ಕೋ ಆಂಖ್ ದೇತ್, ಕೋಡಿನ್ ಕೋ ಕಾಯಾ। ಬಾಂಝುನ್ ಕೋ ಪುತ್ರ ದೇತ, ನಿರ್ಧನ ಕೋ ಮಾಯಾ॥3॥ ಪಾನ್ ಚಢೇ ಫೂಲ್ ಚಢೆ ಔರ್ ಚಢೆ ಮೇವಾ। ಸೂರದಾಸ ಶರಣ್ ಮೇ ಆಯೆ ಸುಫಲ್ ಕೀಜೆ ಸೇವಾಜಯ॥

ಜಗವ ಸೃಷ್ಟಿಪ ವೇಳೆ ಬ್ರಹ್ಮನಿಂದಲಿ **ರಾಗ: ಮಧ್ಯಮಾವತಿ**

ಜಗವ ಸೃಷ್ಟಿಪ ವೇಳೆ ಬ್ರಹ್ಮನಿಂದಲಿ ಪೂಜೆ ಪಡೆದಂಥ ವಿಘ್ನೇಶ ನಿನಗಾರತಿ॥ಪ॥ ಬಲಿಯನ್ನು ಬಂಧಿಸೆ ಹೊರಟ ಶ್ರೀಹರಿಯಿಂದ ಅರ್ಚಿತನಾದಗೆ ಸೊಗದಾರತಿ॥1॥ ತ್ರಿಪುರ ಸಂಹಾರಕೆ ಮುನ್ನ ತಂದೆಯಿಂದ ಪೂಜೆಯ ಪಡೆದಗೆ ರತ್ನದಾರತಿ॥2॥ ಮಹಿಷ ಮರ್ದಿನಿಯಾಗಿ ಹೊರಟ ಮಾತೆಯಿಂದ ಶ್ರೀಮಹಾ ಗಣಪತಿ ನಿನಗಾರತಿ॥3॥ ವಿಘ್ನವಿನಾಶಕ ವಿಜಯ ಪ್ರದಾಯಕ ಸಿದ್ಧಿ ವಿನಾಯಕ ಪುಷ್ಪಾರತಿ॥4॥ ಸುರನರ ಸೇವಿತ ಮಂಗಳ ಮೂರುತಿ ಮುದದಾರತಿ ಶ್ರೀ ಮಹಾಗಣಪತಿ ನಿನಗಾರತಿ॥5॥

ಮಂಗಳಾರತಿ ತಂದು ಬೆಳಗಿರೆ **ರಾಗ: ಮಧ್ಯಮಾವತಿ, ಛಾಪುತಾಳ**

ಮಂಗಳಾರತಿ ತಂದು ಬೆಳಗಿರೆ ಸಿದ್ಧಿ ವಿನಾಯಕನಿಗೆ। ಪ್ರಥಮ ಪೂಜೆಗೆ ಅರ್ಹನಾದ ವಿದ್ಯಾಗಣಪಗೆ॥ಪ॥ ನಂಬಿದ ಸರ್ವ ಜನರನು ಸಲಹುವ ಗಣಪಗೆ। ಈ ಜಗದಲಿ ಆನಂದ ನೀಡಿ ಮುಕ್ತಿನೀಡುವ ಗಣಪಗೆ॥ಚ॥

ವಿಘ್ನೇಶ್ವರನಿಗೆ ಸಿದ್ಧಿದಾಯಕನಿಗೆ **ರಾಗ: ಆನಂದಭೈರವಿ-ಆದಿತಾಳ**

ವಿಘ್ನೇಶ್ವರನಿಗೆ ಸಿದ್ಧಿದಾಯಕನಿಗೆ। ವಿದ್ಯಾವನೆಲ್ಲಾ ಕೊಡುವವಗೆ॥ ಮುದ್ದು ಗೌರಮ್ಮನ ಸೊಂಡಿಲ ಗಣಪಗೆ। ಮುತ್ತಿನಾರತಿ ಎತ್ತಿರೆ॥1॥ ಮೂಷಕ ವಾಹನಗೇ ಪಾಶಾಂಕುಶನಿಗೆ॥ ದೇಶ ದೇಶದಿ ಪೂಜೆಗೊಂಬುವಗೆ। ಈಶ್ವರಾಪುತ್ರ ಸೊಂಡಿಲ ಗಣಪಗೆ। ವಜ್ರಮಾಣಿಕದಾರತಿ ಎತ್ತಿರೆ।2॥ ಗಂಗೆ ಗೌರಿಪುತ್ರ ಚಂದ್ರಶೇಖರನಿಗೆ। ಚಂದ್ರಂಗೆ ಶಾಪವನಿತ್ತವಗೆ। ನಂಜನಗೂಡಲಿ ನೆಲೆಯಾಗಿ ನೆಲೆಸಿರುವ ನಂಜುಂಡೇಶ್ವರನ ಕುಮಾರನಿಗೆ॥3॥

ಲಾಲಿ

ಗಜವದನ ಗಣಪನೆ ಪಾದಕೆ

ಗಜವದನ ಗಣಪನೆ ಪಾದಕೆ ಶರಣ।ವಿಘ್ನನಾಶನೆ ದೇವ ಅಜ್ಞಾನ ಹರಣ॥ಲಾಲಿ॥ ಶ್ರೀ ಗೌರಿ ವರಪುತ್ರ ಶ್ರೀಕಂಠ ತನಯ।ಸ್ಕಂದಾಗ್ರಜ ದೇವ ಲಂಬೋದರ ಶರಣ॥ಲಾಲೀ ॥ಪಾಶ ಅಂಕುಶ ಧರನೆ ಪಾಪ ಹರನೆ ಶರಣ। ಶ್ರೀ ಪ್ರದ ವಾಗೀಶ ಶೂರ್ಪಕರ್ಣಾಶರಣ ॥ಲಾಲೀ॥

ಜೋ3 ಎಂದು ಗಣಪನೆ ನಿನಗೆ **ರಾಗ: ನೀಲಾಂಬರಿ, ತ್ರಿತಾಳ**

ಜೋ ಜೋ ಜೋ ಎಂದು ಗಣಪನೆ ನಿನಗೆ। ಜೋಗುಳ ಹಾಡುವೆ ಪವಡಿಸಯ್ಯ॥ ಜೋ ಜೋ ಜೋ ಎಂದು ಪಾಡಿ ತೂಗುವರು। ಜೋಗುಳ ಆಲಿಸಿ ಹಾಯಾಗಿ ಮಲಗು॥ಪ॥ ಪಾರ್ವತಿ ಪರಮೇಶ್ವರ ಪುತ್ರನೆ ನೀನು। ಪಂಚಮುಖ ಗಣಪನೆ ಪವಡಿಸು ನೀನು॥ ಪಂಚಮಹಾಭೂತಗಳ ತತ್ತ್ವ ಸ್ವರೂಪನೆ। ಪಾಪ ವಿಮೋಚನೆ ಪವಡಿಸು ಗಣಪನೆ॥1॥ ಸೊಂಡಿಲ ಗಣಪನೆ ಸಕಲವೂ ಕೊಡುವನೆ। ಸರ್ವರಾ ರಕ್ಷಿಸುವ ಸರ್ವೇಶ್ವರನೆ॥ ಸರ್ವರೂ ನಿನ್ನನ್ನು ಭಕ್ತಿ ಭಾವಗಳಿಂದ। ಸರ್ವೋತ್ತಮನೆಂದು ಕುಕ್ಕೆ ಸ್ವಾಮಿ ಸೋದರ ನೀನೆಂದು॥2॥

ಲಾಲೀ ಜೋ2 ಲಾಲಿ **ರಾಗ: ಬೃಂದಾವನಸಾರಂಗ**

ಲಾಲೀ ಜೋ ಜೋ ಲಾಲಿ॥ ಲಾಲೀ ಗಣಪಯ್ಯ ಲಾಲಿ ಜಗದಯ್ಯ। ಜಗವನ್ನೇ ತೂಗುವ ಪರಶಿವನ ಮಗನೀಗೆ॥ಪ॥ ರಾವಣನ ಗರ್ವವ ಮುರಿದ ಬಾಲನಿಗೆ। ತಾಯಿ ಆಣತಿಹೊತ್ತು ತಂದೆಯ ಎದುರಿಸಿ। ಗಜಮುಖನೆಂಬೊ ಹೆಸರ ಪಡೆದವಗೆ॥ಲಾಲಿ॥ ಮೊದಲ ಪೂಜೆಯ ನೀನು ಸ್ವೀಕರಿಸು ಎಂದು। ವಿಘ್ನವ ಪರಿಹರಿಸಿ ಕಾಪಾಡು ಎಂದು। ನಾರಿಯರೆಲ್ಲರೂ ಪಾಡಿ ತೂಗುವರು॥ಲಾಲಿ॥

ಮಂಗಳ

ಅಮ್ಮ ಗೌರಮ್ಮನ ಕರೆಯೋಕೆ ಬಂದ **ರಾಗ: ಸೌರಷ್ಟ್ರ**

ಅಮ್ಮ ಗೌರಮ್ಮನ ಕರೆಯೋಕೆ ಬಂದ। ಪುಟ್ಟ ವಿಘ್ನೇಶ್ವರ ಊಟಕ್ಕೆದ್ದ। ತಟ್ಟೆ ಗಂಧಾಕ್ಷತೆ ಹಣೆಯಲಿಟ್ಟ। ದೊಡ್ ಮಣೆಯ ತಾರೆಂದ॥ ಜಯಜಯ ಮಂಗಳಾ॥1॥ ತಾಯಿ ಗೌರಮ್ಮನ ಕರೆಯೋಕೆ ಬಂದ। ಡೊಳ್ಳು ವಿಘ್ನೇಶ್ವರ ಊಟಕ್ಕೆದ್ದ। ಮಾಡಿದ ಮೋದಕಗಳನೆಲ್ಲ ತಿಂದ। ಕೋಲೂರ್‌ಕಂಡ್ ಎದ್ದ॥ ಜಯ ಜಯ ಮಂಗಳಾ॥2॥ ಇಪ್ಪತ್ತೊಂದು ಮೋದಕವನು। ತಪ್ಪದೆಲ್ಲಾ ಮನೆಯಲಿ ತಾ ತಿಂದ। ಹೊಟ್ಟೆ ಭಾರವ ತಡೆಯಲಾರದೆ। ಹೊಟ್ಟೆಗೆ ಸರ್ಪವ ಸುತ್ತಿದ॥ ಜಯ ಜಯ ಮಂಗಳಾ॥3॥

ಆದಿ ವಿಘ್ನೇಶ್ವರಗೆ ಆನಂದ

ಆದಿ ವಿಘ್ನೇಶ್ವರಗೆ ಆನಂದ ಮಹಿಮಗೆ। ಮೋದಕಪ್ರಿಯ ಮೂಷಿಕಾರೂಢಗೇ। ಆದರಿಸಿ ಬೇಡಿದೊಡೆ ವರಗಳ ನೀವದೇವಗೆ। ಅವೇದವೇದಾಂತ ಚಿನ್ಮಯರೂಪಗೇ॥1॥ ತೋರಹೊಟ್ಟೆ ಮೇಲೆ ಫಣಿಯ ಸುತ್ತಿದವಗೆ। ದಾರಕಂಕಣಕರದಿ ಹೊಳೆಯುತಿಹಗೇ। ಹಾರಹೀರಾವಳಿಗೆ ಪದಕದಮುತ್ತಿನಜನಿವಾರ ಒಪ್ಪತ್ತುಗಣನಾಥಗೆ॥2॥ ಮುದ್ದು ಗಣನಾಥಗೆ ಗಿಲುಕಮಂಡಿಗೆ ಗೆಜ್ಜೆ ತೊಡಕು ಮಂಡಿಗ್ಗಾಲು ಪೆಡರುಪೆಂಡ್ಯವು। ಪಾಗುಪಟ್ಟೆಯೆಸೆಯೆಸೆಯೇ ಉಡಿದಾರಉಡಿ। ಗಂಟೇಸರಗಂಟೆಹೊಳೆಯುತ್ತಾ ನಲಿಯುತ್ತ ಬಂದನೇ। ನಮ್ಮನೆಗೆ॥3॥ ಬಂದ ವಿಘ್ನೇಶ್ವರನ ಚಂದದಿಂದೆರುಗೊಂಡು ಬಂದಿರೇಸ್ವಾಮಿ ಎಂದುಪಚರಿಸುತಾ। ಇಂದುನಮ್ಮ ಜನ್ಮವೂ। ಸಾಫಲ್ಯವಾಯಿತು। ಎಂದು ಕರಗಳ ಮುಗಿದು ಬೇಡಿಕೊಂಬೆ॥4॥ ವಿಧ್ಯಬುದ್ಧೀಕೊಡು। ಸಿದ್ಧಿಕಾಮ್ಯಾರ್ಥಿಯನೂ। ನಿಮ್ಮಲ್ಲಿಬೇಡುವೇ॥ ಮುದ್ದು ಗಣಪತಿ ನಮ್ಮ ಸಲಹೋ॥5॥ ಜಯಮಂಗಳಂ ನಿತ್ಯ ಶುಭಮಂಗಳಂ॥

ಬಾಲ ಗಣಪತಿಗೆ ಮಂಗಳ **ರಾಗ: ಸುರುಟಿ, ಏಕತಾಳ**

ಬಾಲ ಗಣಪತಿಗೆ ಮಂಗಳ ಸುಶೀಲವಂತಗೆ ಮಂಗಳ॥ಪ.॥ ಮೋದಕಪ್ರಿಯಗೆ ಮಂಗಳ। ಮೋಹಕರೂಪಗೆ ಮಂಗಳ। ಮುದವನೀವಗೆ ಮಂಗಳ। ಮಹೇಶ ಸುತಗೆ ಮಂಗಳ॥1॥ ಶಂಭು ಕುವರಗೆ ಮಂಗಳ। ಲಂಭೋದರಗೆ ಮಂಗಳ। ಸ್ಕಂದ ಪೂರ್ವಜಗೆ ಮಂಗಳ। ಬಂಧ ಮೋಚಕಗೆ ಮಂಗಳ॥2॥ ಚಾಮರ ಕರ್ಣಗೆ ಮಂಗಳ। ಪ್ರೇಮದಿ ಕಾವಗೆ ಮಂಗಳ। ಸಿಂಧೂರ ಪ್ರಿಯಗೆ ಮಂಗಳ। ಶಾರದೇನುತಗೆ ಮಂಗಳ॥3॥

ಭೂಮಿಯೊಳುಳ್ಳ ಪೂಜಾರ್ತಿಯತಂದು ರಾಗ: ಮಧ್ಯಮಾವತಿ

ಭೂಮಿಯೊಳುಳ್ಳ ಪೂಜಾರ್ತಿಯತಂದು। ಗಣಪನನಾಮ ಸಹಸ್ರವಮಾಡಿ। ಗರಿಕೆ -ಗಳಿಂದಷ್ಟೋತ್ತರವ ಮಾಡುತ। ಪೂಜೆಯ ಮಾಡಿದರು। ಜಯಜಯ ಮಂಗಳಾ।।1।। ದೊಡ್ಡ ಬಾಳೆಎಲೆ ಅಗ್ರವ ಹಾಕೀ। ಪಾತ್ರಾಭಿಗಾರವ ಭಕ್ತಿಲಿ ಮಾಡಿ। ಚಟ್ನಿಯು ಕೋಸಂಬ್ರಿಯು। ಪಲ್ಯಗಳೂ ಪಚಡಿ ಬಡಿಸಿದರೂ। ಜಯ ಜಯ ಮಂಗಳಾ।।2।। ಮಜ್ಜಿಗೆ ಪಳದ್ಯವು ಶಾವಿಗೆ ಪಾಯಸ। ಮೊಸರನ್ನವು ಹುಗ್ಗಿಯ ಅನ್ನವನೂ। ಹುಳಿ ಅನ್ನವೂ ಹೂರಣದೊಬ್ಬಟ್ಟು। ತುಪ್ಪವ ಬಡಿಸಿದರು। ಜಯಜಯ ಮಂಗಳಾ।।3।। ಹೊಟ್ಟೆಯ ಗಣಪಗೆ ಉದ್ದಿನ ಕಡುಬು। ಹೊಯ್ ಕಡುಬು ಹೂರಣ। ಕಡುಬುಗಳೂ ಕರಿಗಡುಬು ಚಕ್ಕುಲಿ। ತೇಂಗೊಳಲೂ ನೈವೇದ್ಯವನಿತ್ತರೂ। ಜಯಜಯ ಮಂಗಳಾ।।4।। ಸಣ್ಣಕ್ಕಿ ಅನ್ನವು ಸೊಂಡಿಲಗಣಪಗೆ। ಹುಳಿ ತೊವ್ವೇ ತುಪ್ಪವ ಬಡಿಸಿದರು। ಎಳನೀರು ಪಾನಕ ನೀರುಮಜ್ಜಿಗೆಗಳ। ಗಣಪಗೆ ಬಡಿಸಿದರು। ಜಯ ಜಯ ಮಂಗಳಾ।।5।। ಧೂಪದೀಪ ನೈವೇದ್ಯವಮಾಡಿ। ಅರ್ಘ್ಯಪಾದ್ಯ ಆಚಮನಗಳಿತ್ತೂ। ಭಕ್ತಿಯಿಂದ ನೀರಾಂಜನ ಬೆಳಗಿ ಆಚಮನಗಳಿತ್ತೂ। ಜಯ ಜಯ ಮಂಗಳಾ।।6।। ವೇದಮಂತ್ರದಿ ಮಂತ್ರ ಪುಷ್ಪವನರ್ಪಿಸಿ। ಸುತ್ತಿ ಪ್ರದಕ್ಷಿಣೆ ನಮಸ್ಕಾರವಮಾಡಿ। ಅಷ್ಟ ಸಿದ್ಧಿಗಳನು ಪಾಲಿಸು। ಎನುತಲಿ ವರಗಳ ಬೇಡಿದರೂ। ಜಯಜಯ ಮಂಗಳಾ।।7।। ಗಜಮುಖನಿಗೆ ಪುನಃಪೂಜೆಯಮಾಡಿ। ಹರನ ಕುಮಾರನ ಭಜನೆಯ ಮಾಡಿ। ವನಿತೇರೆಲ್ಲರು ಪದಗಳ ಪಾಡಿ। ಆರತಿಮಾಡಿದರೂ। ಜಯಜಯಮಂಗಳ।।8।। ಆಯುರಾರೋಗ್ಯವು ಧನಧಾನ್ಯವನು। ಮುತ್ತಿನ ಓಲೆಯು, ಸ್ಥಿರವಾಗಿರಿಸೂ। ತನ್ನ ಪುತ್ರಿಯರ ಪಾಲಿಸುಯೆನುತಲೆ। ವನಿತೇರೆಲ್ಲರು ಬೇಡಿದರು। ಜಯಜಯಮಂಗಳಾ।।9।। ಮಂಗಳಂ ಹರನ ಕುಮಾರಗೆ। ಜಯಜಯ ಮಂಗಳಂ ಗೌರಿಪುತ್ರಗೆ। ಜಯಜಯ ಮಂಗಳಂ ಭಕ್ತರ ಪಾಲಿಪ ಗಣಪಗೆ। ಶುಭಮಂಗಳ ಪಾಡುವೆನೂ ಜಯಜಯ ಮಂಗಳಾ।।10।।

ಮೂಲ ಮಂಟಪದಲ್ಲಿ ಲೋಲ ಗಣೇಶ ರಾಗ: ಸುರಟಿ

ಮೂಲ ಮಂಟಪದಲ್ಲಿ ಲೋಲ ಗಣೇಶ। ಪಾಲಿಸು ವರಗಳ ಪರಮ ಪ್ರಕಾಶ। ಪಾಲಿಸು ಪರಮ ಕಟಾಕ್ಷವ ಎನಗೆ। ಸುಶೀಲ ಮೂರುತಿ ಶಿವಸುತ ವಿಘ್ನೇಶಗೆ ನೀಲದಾರುತಿಯ ಬೆಳಗೀರೇ ।।ಮಂಗಳಂ।। ಉಂಡಲಿಗೆಯ ಮೋದಕ ನೆಲಗಡಲೆ ಖಂಡ್ರಿಸಿದಾ ಕಬ್ಬು ಕಡಲೆ ರಾಶಿಗಳು। ತಂಡ ತಂಡದಿ ಭಕ್ಷ್ಯ ಭೋಜ್ಯ ನೈವೇದ್ಯವ। ಉಂಡು ಕುಳ್ಳಿರುವ ಉದ್ದಂಡ ಗಣೇಶಗೆ। ಕುಂದಣ ದಾರತಿಯಾ ಬೆಳಗೀರೇ।।ಮಂಗಳಂ।। ಧರೆಯೊಳು ಶೃಂಗೇರಿ ಪುರದ ಮಧ್ಯದಲಿ। ಹರನ ಸನ್ನಿಧಿ ಯಲಿ ವಾಮಭಾಗದಲಿ। ಸ್ಥಿರವಾಗಿ ನಿನ್ನ ನಂಬಿದ ಭಕ್ತರಿಗೆ। ವರಗಳ ಕೊಡುವೋ ಚಲುವ ಗಣೇಶ ನಿಗೆ। ಹರಳಿನಾರತಿಯಾ ಬೆಳಗೀರೇ।।ಮಂಗಳಂ।।

ಮಂಗಳ ಮಂಗಳ ಗಣಪತಿಗೇ ರಾಗ: ಸುರುಟಿ

ಮಂಗಳ ಮಂಗಳ ಗಣಪತಿಗೇ। ಜಯಮಂಗಳ ಗೌರಿ ಸುಪುತ್ರನಿಗೆ।।ಪ।। ಗಜವದನಾ ಹೇರಂಬನಿಗೆ। ಭುಜಗ ಭೂಷಣನಾದವಗೇ। ಪಾಶಾಂಕುಶಧರ ಮೋದಕ ಹಸ್ತನಿಗೆ ಸಿದ್ಧಿವಿನಾಯಕ ದೇವನಿಗೆ।।1।। ಜಯಜಯ ಶ್ರೀ ಗಣನಾಥನಿಗೇ ಭವಭಯ ಪರಿಹರಿಪಾತನಿಗೇ।। ಸಿದ್ಧಿಬುದ್ಧಿ ಪ್ರಿಯ ಮೂಷಕವಾಹನ। ಶರಣಾಗತ ಜನರಕ್ಷಕಗೇ।।2।। ಚಂದ್ರನ ಗರ್ವವ ಮುರಿದವಗೇ। ಚಂದ್ರಗೆ ಶಾಪವನಿತ್ತವಗೇ। ಆದಿ ಪೂಜೆಯ ಪೊಂದುತ ಮೋದದಿ। ಮೂರು ಲೋಕಂಗಳ ಪೊರೆಯುವಗೇ।।3।।

ಮಂಗಳಮ್ ಗಜಮುಖಗೇ

ಮಂಗಳಮ್ ಗಜಮುಖಗೇ। ಗೌರೀತನಯಗೇ।। ಮಂಗಳಮ್ ಗಜಮುಖಗೇ।।ಪ।। ಮೋದಕ ಧರನಿಗೇ। ಮೋದಕ ಪ್ರಿಯನಿಗೇ। ಪಾಶಾಂಕುಶಧರಗೇ। ಪಾರ್ವತಿ ತನಯಗೇ।।1।। ಕಡುಬುಹೋಳಿಗೆ ತಿಂದು

ಇಲಿಯವಾಹನವೇರಿ। ಸಡಗರದಿಂದಲಿ ಬರುವ ಗಣೇಶಗೇ।। ಬರುವಗಜಮುಖನಿಗೇ।।2।। ಅಷ್ಟನೆಲ್ಲವ ಕಂಡು ನಕ್ಕನೆ ಚಂದ್ರನು। ಥಟ್ಟನೆಶಾಪವ ಕೊಟ್ಟನೆಚಂದ್ರಗೇ।।ಮಂಗಳಮ್ ಗಜಮುಖಗೆ ಗೌರೀ ತನಯಗೇ ಮಂಗಳಮ್ ಗಜಮುಖಗೇ।।3।।

ಮಂಗಳವೆನ್ನಿರೇ ಗಣರಾಜಗೇ **ರಾಗ:ಸುರುಟಿ**

ಮಂಗಳವೆನ್ನಿರೇ ಗಣರಾಜಗೇ। ಜಯಮಂಗಳವೆನ್ನಿರೇ। ಗಜವದನನಿಗೇ।।ಪ।। ಪಾದಕೆ ಮಂಗಳ। ಪರಮ ಪಾವನಗೇ। ಜಾನುಜಂಘೆಗೆ ಮಂಗಳ। ಜಗದಂಬಸುತನ ಹೃದಯಕ್ಕೆ ಮಂಗಳ। ಸಹೃದಯ ಗಣಪತಿಗೆ। ನಾಭಿಗೆ ಮಂಗಳ ನಾಗಭೂಷಣ ಸುತಗೆ।।1।। ಹಸ್ತಕ್ಕೆ ಮಂಗಳ ಮೋದಕ ಹಸ್ತಗೆ। ಕಂಠಕ್ಕೆ ಮಂಗಳ ವಿಷಕಂಠ ಸುತಗೇ ಮುಖಕ್ಕೆ ಮಂಗಳ। ಗಜಮುಖನಾದವಗೆ। ನಾಸಿಕಕೆ ಮಂಗಳ ನಯಗುಣಾನ್ವಿತಗೇ।।2।।

ಸಿದ್ಧಿ ಬುದ್ಧಿ ಗಣಪತಿಗೆ **ರಾಗ: ಸುರಟಿ**

ಸಿದ್ಧಿ ಬುದ್ಧಿ ಗಣಪತಿಗೆ। ಜಯ ಮಂಗಳಂ ನಿತ್ಯ ಶುಭಮಂಗಳಂ।।ಪ।। ಗೌರಿತನಯನಿಗೆ ಜಯಮಂಗಳಂ। ಕರಿವದನ ದೇವನಿಗೆ ಶುಭಮಂಗಳಂ। ನಾಟ್ಯ ನಿಪುಣನಿಗೆ ಜಯಮಂಗಳಂ। ವಿದ್ಯಾಧಿಪತಿಗೆ ಶುಭಮಂಗಳಂ।।1।। ರಕ್ತವರ್ಣನಿಗೆ ಜಯಮಂಗಳಂ। ಭಕ್ತರ ಸಲಹುವಗೆ ಶುಭಮಂಗಳಂ। ಮೂಷಿಕವಾಹಗೆ ಜಯಮಂಗಳಂ। ಮೋದಕ ಪ್ರಿಯನಿಗೆ ಶುಭಮಂಗಳಂ।।2।। ಮಂಗಳಂ ಗಣ ನಾಥಾಯ। ಮಂಗಳಂ ಹರಸೂನುವೇ। ಮಂಗಳಂ ವಿಘ್ನ ರಾಜಾಯ। ವಿಘ್ನಹರ್ತೇಸ್ತು ಮಂಗಳಂ।।3।।

ಶ್ರೀ ಶಾರದಾ ಸ್ತುತಿ

ದೇವರನಾಮ

ದಯಮಾಡೇ ದಯಮಾಡೇ ತಾಯೆ **ರಾಗ: ಸರಸ್ವತಿ - ಆದಿತಾಳ**

ದಯಮಾಡೇ ದಯಮಾಡೇ ತಾಯೆ ವಾಗ್ದೇವಿ। ದಯದಿಂದ ನೀನೆನ್ನ ನೋಡೆ ವಾಗ್ದೇವಿ।।ಪ।। ಹಿತದ ಸನ್ಮತಿಯ ಶ್ರೀಮತಿದೇವಿ ನೀಡೆ। ವ್ರತತಿಜನೇತ್ರೆ ಭಾರತಿ ನೀ ದಯಮಾಡೆ।।ಅ.ಪ.।। ಸುಮುಖೀ ತ್ವಚರಣಾಬ್ಜ ಧೃಮಛಾಯಾಶ್ರಿತರ। ಸುಮತಿಗಳೊಳಗಿಟ್ಟು ಮಮತೆಯಿಂ ಸಲಹೆ। ಜಗನ್ನಾಥ ವಿಠಲನಂಘ್ರಿಗಳ ಸೇವೆಯೊಳು। ಸುಗುಣೆ ಸನ್ಮತಿ ಕೊಟ್ಟು ಬೇಗೆನ್ನ ಸಲಹೆ।।ಚ।।

ನಿನ್ನಡಿ ತಾವರೆಯೊಳು **ರಾಗ: ಅಹಿರ್ ಭೈರವ್**

ನಿನ್ನಡಿ ತಾವರೆಯೊಳು ನಿರತ ಶರಣಾಗಿಹೆ। ಅನವರತವು ನಿನ್ನ ಮಡಿಲೊಳು ನಾನಿರುವೆ। ಪರಮ ದಯಾಕರಿ ಪರಮ ಕೃಪಾಕರಿ। ಶಾರದೆ ವರದೇ ವೀಣಾ ಪಾಣಿ।।1।। ಹಂಸವಾಹಿನಿ ಹೃನ್ಮಂದಿರವಾಸಿನಿ। ಶ್ವೇತಾಂಬರಧರ ಶೋಭಿನಿ ದೇವಿ। ಸಕಲ ಕಲಾಶಾಸ್ತ್ರ ನಿಪುಣೆ ರಾಣೀ। ವೇದ ವೇದಾಂತ ರಸಿಕ ಶಿರೋಮಣಿ।।2।। ಜನನೀ ಜಗತ್ ಜನನೀ ನಿತ್ಯಕಲ್ಯಾಣಿ। ಬ್ರಹ್ಮಾಂಡ ರೂಪಿಣೀ ಬ್ರಹ್ಮನ ರಾಣೀ। ಶಾರದೆ ವಂದಿತೆ ಸಂಕಟಹಾರಿಣಿ। ಸರಸ ವಿಲಾಸಿನೀ ಸುಮಧುರಭಾಷಿಣಿ।।3।।

ಪಾಲಿಸೆ ಸರಸ್ವತಿ ಪಾಲಿಸೆ **ರಾಗ: ಸರಸ್ವತಿ**

ಪಾಲಿಸೆ ಸರಸ್ವತಿ ಪಾಲಿಸೆ ಪಾಲಿಸೆ ನಿನ್ನಯ ಪಾರಿಗೆ ಬಂದೆನು ಕಾಲಕಾಲಕೆ ನಿನ್ನಯ ಕಾಲಿಗೆರಗುವೆ ಪಾಲಿಸೆ।।ಪ।। ಆದಿ ಬ್ರಹ್ಮನರಾಣಿಯೆ ವೇದಕ್ಕಭಿಮಾನಿಯೆ। ನೀ ದಯಮಾಡಿ ಮತಿಯಕೊಡು ಮೋದಗಾಯನ ಕುಶಲಳೆ ಸರಸ್ವತಿ।।ಅ.ಪ.।। ಹೊನ್ನವರೆ ಹೊಸ ಕಪ್ಪು ಬೆನ್ನಿನ ಮ್ಯಾಲಿನ ಹೆರಳು ಕಿನ್ನರಿ ನಿನ್ನ ಬಲಗೈಯಕಿನ್ನರಿ ನಿನ್ನ ಬಲಗೈಯ್ಯಲಿ ಹಿಡಕೊಂಡು ಖನಿ ಬಾ ನಮ್ಮ ವಚನಕ್ಕೆ।।1।। ಮಿತ್ರೆ ಸರಸ್ವತಿಗೆ ಮುತ್ತಿನ ಉಡಿಯಕ್ಕಿ ಮತ್ತೆ ಮಲ್ಲಿಗೆಯ ನೆನೆದಂಡೆ